ನಾಪ್ನೋತ್। ಯಥ್ಸಗ್ಂಸೃಪೋ ಭವಂತಿ। ಇಂದ್ರಿಯಮೇವ ತದ್ವೀರ್ಯಂ ಯಜಮಾನ ಆಪ್ನೋತಿ। ಪೂರ್ವಾಪೂರ್ವಾ ವೇದಿರ್ಭವತಿ। ಇಂದ್ರಿಯಸ್ಯ ವೀರ್ಯಸ್ಯಾವರುದ್ಧ್ಯೈ। ಪುರಸ್ತಾದುಪಸದಾಗ್ಂ ಸೌಮ್ಯೇನ ಪ್ರಚರತಿ। ಸೋಮೋ ವೈ ರೇತೋಧಾಃ। ರೇತ ಏವ ತದ್ದಧಾತಿ। ಅಂತರಾ ತ್ವಾಷ್ಟ್ರೇಣ। ರೇತ ಏವ ಹಿತಂತ್ವಷ್ಟಾ ರೂಪಾಣಿ ವಿಕರೋತಿ। ಉಪರಿಷ್ಟಾದ್ವೈಷ್ಣವೇನ। ಯಜ್ಞೋ ವೈ ವಿಷ್ಣುಃ। ಯಜ್ಞ ಏವಾಂತತಃ ಪ್ರತಿತಿಷ್ಠತಿ ॥ ೨ ॥

ಸಪ್ತಮೇ ದಧಾತಿ ಪಞ್ಚ ಚ ॥ 1 ॥

ಜಾಮಿ ವಾ ಏತತ್ಕುರ್ವಂತಿ। ಯಥ್ಸದ್ಯೋ ದೀಖ್ಷಯಂತಿ ಸದ್ಯಸ್ಸೋಮಙ್ಕ್ರೀಣಂತಿ। ಪುಂಡರಿಸ್ರಜಾಂ ಪ್ರಯಚ್ಛತ್ಯಜಾಮಿತ್ವಾಯ। ಅಙ್ಗಿರಸಸ್ಸುವರ್ಗಲ್ಲೋಕಂ ಯಂತಃ। ಅಪ್ಸು ದೀಖ್ಷಾತಪಸೀ ಪ್ರಾವೇಶಯನ್। ತತ್ಪುಂಡರೀಕಮಭವತ್। ಯತ್ಪುಂಡರಿಸ್ರಜಾಂ ಪ್ರಯಚ್ಛತಿ। ಸಾಖ್ಷಾದೇವ ದೀಖ್ಷಾತಪಸೀ ಅವರುಂಧೇ। ದಶಭಿರ್ವಥ್ಸತರೈಸ್ಸೋಮಙ್ಕ್ರೀಣಾತಿ। ದಶಾಖ್ಷರಾ ವಿರಾಟ್ ॥ ೩ ॥ ಅನ್ನಂ ವಿರಾಟ್। ವಿರಾಜೈವಾನ್ನಾದ್ಯಮವರುಂಧೇ। ಮುಷ್ಕರಾ ಭವಂತಿ ಸೇಂದ್ರತ್ವಾಯ। ದಶಪೇಯೋ ಭವತಿ। ಅನ್ನಾದ್ಯಸ್ಯಾವರುದ್ಧ್ಯೈ। ಶತಂ

ಬ್ರಾಹ್ಮಣಾಃ ಪಿಬಂತಿ । ಶತಾಯುಃ ಪುರುಷಶ್ಶತೇಂದ್ರಿಯಃ । ಆಯುಷ್ಯೇ-
ವೇಂದ್ರಿಯೇ ಪ್ರತಿತಿಷ್ಠತಿ । ಸಪ್ತದಶಗ್ಂಸ್ತೋತ್ರಂ ಭವತಿ । ಸಪ್ತದಶಃ
ಪ್ರಜಾಪತಿಃ ॥ ೪ ॥ ಪ್ರಜಾಪತೇ ರಾಪ್ತ್ಯೈ । ಪ್ರಾಕಾಶಾವದ್ವರ್ಯವೇ
ದದಾತಿ । ಪ್ರಕಾಶಮೇವೈನಙ್ಗಮಯತಿ । ಸ್ರಜಮುದ್ಗಾತ್ರೇ । ವ್ಯೇವಾಸ್ಯೈ
ವಾಸಯತಿ । ರುಕ್ಮಗ್ಂ ಹೋತ್ರೇ । ಆದಿತ್ಯಮೇವಾಸ್ಮಾ ಉನ್ನಯತಿ ।
ಅಶ್ವಂ ಪ್ರಸ್ತೋತೃಪ್ರತಿಹರ್ತೃಭ್ಯಾಮ್ । ಪ್ರಾಜಾಪತ್ಯೋ ವಾ ಅಶ್ವಃ ।
ಪ್ರಜಾಪತೇರಾಪ್ತ್ಯೈ ॥ ೫ ॥ ದ್ವಾದಶ ಷಷ್ಠೌಹೀರ್ಬ್ರಹ್ಮಣೇ । ಆಯು-
ರೇವಾವರುಂಧೇ । ವಶಾಂ ಮೈತ್ರಾ ವರುಣಾಯ । ರಾಷ್ಟ್ರಮೇವ
ವಶ್ಯಕಃ । ಋಷಭಂ ಬ್ರಾಹ್ಮಣಾಚ್ಛಗ್ಂಸಿನೇ । ರಾಷ್ಟ್ರಮೇವೇಂದ್ರಿಯಾ-
ವ್ಯಕಃ । ವಾಸಸೀ ನೇಷ್ಟ್ರಾಪೋತೃಭ್ಯಾಮ್ । ಪವಿತ್ರೇ ಏವಾಸ್ಯೈತೇ ।
ಸ್ಥೂರೀ ಯವಾಚಿತಮಚ್ಛಾವಾಕಾಯ । ಅಂತತ ಏವ ವರುಣಮವ
ಯಜತೇ ॥ ೬ ॥ ಅನಡ್ವಾಹಮಗ್ನೀಧ್ರೇ । ವಹ್ನಿರ್ವಾ ಅನಡ್ವಾನ್ ।
ವಹ್ನಿರಗ್ನೀತ್ । ವಹ್ನಿನೈವ ವಹ್ನಿ ಯಜ್ಞಸ್ಯಾವರುಂಧೇ । ಇಂದ್ರಸ್ಯ
ಸುಷುವಾಣಸ್ಯ ತ್ರೇಧೇಂದ್ರಿಯಂ ವೀರ್ಯಂ ಪರಾऽಪತತ್ । ಭೃಗು-
ಸ್ತೃತೀಯಮಭವತ್ । ಶ್ರಾಯಂತೀಯಂತೃತೀಯಮ್ । ಸರಸ್ವತೀ
ತೃತೀಯಮ್ । ಭಾರ್ಗವೋ ಹೋತಾ ಭವತಿ । ಶ್ರಾಯಂತೀಯಂ

ಬ್ರಹ್ಮಸಾಮಂ ಭವತಿ। ವಾರವಂತೀಯಮಗ್ನಿಷ್ಟೋಮಸಾಮಮ್।
ಸಾರಸ್ವತೀರಪೋ ಗೃಹ್ಣಾತಿ। ಇಂದ್ರಿಯಸ್ಯ ವೀರ್ಯಸ್ಯಾವರುದ್ಧ್ಯೈ।
ಶ್ರಾಯಂತೀಯಂ ಬ್ರಹ್ಮಸಾಮಂ ಭವತಿ। ಇಂದ್ರಿಯಮೇವಾಸ್ಮಿ-
ನ್ವೀರ್ಯಗ್ಂ ಶ್ರಯತಿ। ವಾರವಂತೀಯಮಗ್ನಿಷ್ಟೋಮಸಾಮಮ್।
ಇಂದ್ರಿಯಮೇವಾಸ್ಮಿನ್ವೀರ್ಯಂ ವಾರಯತಿ ॥ ೭ ॥

ವಿರಾಟ್ಪ್ರಜಾಪತಿರಶ್ವಃ ಪ್ರಜಾಪತೇರಾಪ್ತ್ಯೈ ಯಜತೇ ಬ್ರಹ್ಮ-
ಸಾಮಂ ಭವತಿ ಸಪ್ತ ಚ ॥ 2 ॥

ಈಶ್ವರೋ ವಾ ಏಷ ದಿಶೋಽನೂನ್ಮದಿತೋಃ। ಯಂದಿ-
ಶೋಽನು ವ್ಯಸ್ಥಾಪಯಂತಿ। ದಿಶಾಮವೇಷ್ಟಯೋ ಭವಂತಿ।
ದಿಕ್ಷ್ವೇವ ಪ್ರತಿತಿಷ್ಠತ್ಯನುನ್ಮಾದಾಯ। ಪಞ್ಚ ದೇವತಾ ಯಜತಿ।
ಪಞ್ಚ ದಿಶಃ। ದಿಕ್ಷ್ವೇವ ಪ್ರತಿತಿಷ್ಠತಿ। ಹವಿಷೋ ಹವಿಷ ಇಷ್ಟ್ವಾ
ಬಾರ್ಹಸ್ಪತ್ಯಮಭಿಘಾರಯತಿ। ಯಜಮಾನದೇವತ್ಯೋ ವೈ ಬೃಹ-
ಸ್ಪತಿಃ। ಯಜಮಾನಮೇವ ತೇಜಸಾ ಸಮರ್ಧಯತಿ ॥ ೮ ॥ ಆದಿತ್ಯಾಂ
ಮರ್ಹಾಜ್ಯಾರ್ಭಿಣೇಮಾಲಭತೇ। ಮಾರುತೀಂ ಪ್ರಶ್ನಿಂ ಷಷ್ಠೌ-
ಹೀಮ್। ವಿಶಞ್ಚೈವಾಸ್ಮೈ ರಾಷ್ಟ್ರಞ್ಚ ಸಮೀಚೀ ದಧಾತಿ।
ಆದಿತ್ಯಯಾ ಪೂರ್ವಯಾ ಪ್ರಚರತಿ। ಮಾರುತ್ಯೋತ್ತರಯಾ। ರಾಷ್ಟ್ರ

ಏವ ವಿಶಮನು ಬಧ್ನಾತಿ। ಉಚ್ಚೈರಾದಿತ್ಯಾಯಾ ಆಶ್ರಾವಯತಿ। ಉಪಾಗ್ಂಶು ಮಾರುತ್ಯೈ। ತಸ್ಮಾದ್ರಾಷ್ಟ್ರಂ ವಿಶಮತಿವದತಿ। ಗರ್ಭಿಣ್ಯಾದಿತ್ಯಾ ಭವತಿ ॥ ೯ ॥ ಇಂದ್ರಿಯಂ ವೈ ಗರ್ಭಃ। ರಾಷ್ಟ್ರಮೇವೇಂದ್ರಿಯಾವ್ಯಕಃ। ಅಗರ್ಭಾ ಮಾರುತೀ। ವಿಡ್ವೈ ಮರುತಃ। ವಿಶಮೇವ ನಿರಿಂದ್ರಿಯಾಮಕಃ। ದೇವಾಸುರಾಸ್ಸಂಯತ್ತಾ ಆಸನ್। ತೇ ದೇವಾ ಅಶ್ವಿನೋಃ ಪೂಷನ್ವಾಚಸ್ಸತ್ಯಗ್ಂ ಸನ್ನಿಧಾಯ। ಅನೃತೇನಾಸುರಾನಭ್ಯ ಭವನ್। ತೇಽಶ್ವಿಭ್ಯಾಂ ಪೂಷ್ಣೇ ಪುರೋಡಾಶಂದ್ವಾದಶಕಪಾಲನ್ನಿರವಪನ್। ತತೋ ವೈ ತೇ ವಾಚಸ್ಸತ್ಯಮವಾರುಂಧತ ॥ ೧೦ ॥ ಯದಶ್ವಿಭ್ಯಾಂ ಪೂಷ್ಣೇ ಪುರೋಡಾಶಂದ್ವಾದಶಕಪಾಲನ್ನಿರ್ವಪತಿ। ಅನೃತೇನೈವ ಭ್ರಾತೃವ್ಯಾನಭಿಭೂಯ। ವಾಚಸ್ಸತ್ಯಮವರುಂಧೇ। ಸರಸ್ವತೇ ಸತ್ಯವಾಚೇ ಚರುಮ್। ಪೂರ್ವಮೇವೋದಿತಮ್। ಉತ್ತರೇಣಾಭಿ ಗೃಣಾತಿ। ಸವಿತ್ರೇ ಸತ್ಯ ಪ್ರಸವಾಯ ಪುರೋಡಶಂದ್ವಾದಶಕಪಾಲಂ ಪ್ರಸೂತ್ಯೈ। ದೂತಾನ್ಪ್ರಹಿಣೋತಿ। ಆವಿದ ಏತಾ ಭವಂತಿ। ಆವಿದಮೇವೈನಙ್ಗಮಯಂತಿ। ಅಥೋ ದೂತೇಭ್ಯ ಏವ ನ ಛಿದ್ಯತೇ। ತಿಸೃಧನ್ವಗ್ಂ ಶುಷ್ಕದೃತಿರ್ದಖ್ಷಿಣಾ ಸಮೃದ್ಧ್ಯೈ ॥ ೧೧ ॥

ಅರ್ಧಯತಿ ಭವತ್ಯರುಂಧತ ಗಮಯಂತಿ ದ್ವೇ ಚ ॥ 3 ॥

ಆಗ್ನೇಯಮಷ್ಟಾಕಪಾಲನ್ನಿರ್ವಪತಿ। ತಸ್ಮಾಚ್ಛಿಶಿರೇ ಕುರು-
ಪಞ್ಚಾಲಾಃ ಪ್ರಾಞ್ಚೋ ಯಾಂತಿ। ಸೌಮ್ಯಞ್ಚರುಮ್। ತಸ್ಮಾದ್ವ-
ಸಂತಂ ವ್ಯವಸಾಯಾ ದಯಂತಿ। ಸಾವಿತ್ರಂದ್ವಾದಶಕಪಾಲಮ್।
ತಸ್ಮಾತ್ಪುರಸ್ತಾದ್ಯವಾನಾಗ್ಂ ಸವಿತ್ರಾ ವಿರುಂಧತೇ। ಬಾರ್ಹಸ್ಪತ್ಯಂ-
ಞ್ಚರುಮ್। ಸವಿತ್ರೈವ ವಿರುಧ್ಯ। ಬ್ರಹ್ಮಣಾ ಯವಾನಾದಧತೇ।
ತ್ವಾಷ್ಟ್ರಮಷ್ಟಾಕಪಾಲಮ್ ॥ ೧೨ ॥ ರೂಪಾಣ್ಯೇವ ತೇನ ಕುರ್ವತೇ।
ವೈಶ್ವಾನರಂದ್ವಾದಶಕಪಾಲಮ್। ತಸ್ಮಾಜ್ಜಘನ್ಯೇ ನೈದಾಘೇ ಪ್ರತ್ಯಞ್ಚಃ
ಕುರುಪಞ್ಚಾಲಾ ಯಾಂತಿ। ಸಾರಸ್ವತಞ್ಚರುನ್ನಿರ್ವಪತಿ। ತಸ್ಮಾತ್ತ್ವಾವೃಷಿ
ಸರ್ವಾವಾಚೋ ವದಂತಿ। ಪೌಷ್ಣೇನ ವ್ಯವಸ್ಯಂತಿ। ಮೈತ್ರೇಣ
ಕೃಷಂತೇ। ವಾರುಣೇನ ವಿಧೃತಾ ಆಸತೇ। ಖೈತ್ರಪತ್ಯೇನ
ಪಾಚಯಂತೇ। ಆದಿತ್ಯೇನಾ ದಧತೇ ॥ ೧೩ ॥ ಮಾಸಿಮಾಸ್ಯೇತಾನಿ
ಹವೀಗ್ಂಷಿ ನಿರುಪ್ಯಾಣೇತ್ಯಾಹುಃ। ತೇನೈ ವರ್ತೂನ್ವ್ಯಯುಚ್ಯ ಇತಿ।
ಅಥೋ ಖಿಲ್ವಾಹುಃ। ಕಸ್ಸಂವಥ್ಸರಞ್ಜೀವಿಷ್ಯತೀತಿ। ಷಡೇವ ಪೂರ್ವೇ-
ದ್ಯುರ್ನಿರುಪ್ಯಾಣೆ। ಷಡುತ್ತರೇದ್ಯುಃ। ತೇನೈವರ್ತೂನ್ವ್ಯಯುಚ್ಯತೇ।
ದಖ್ಷಿಣೋ ರಥವಾಹನವಾಹಃ ಪೂರ್ವೇಷಾಂದಖ್ಷಿಣಾ। ಉತ್ತರ

ಉತ್ತರೇಷಾಮ್। ಸಂವತ್ಸರಸ್ಯೈ ವಾನ್ತೌ ಯುನಕ್ತಿ। ಸುವರ್ಗಸ್ಯ ಲೋಕಸ್ಯ ಸಮಷ್ಟ್ಯೈ ॥ ೧೪ ॥

ತ್ವಾಷ್ಟ್ರಮಷ್ಟಾಕಪಾಲಂ ದಧತೇ ಯುನಕ್ತ್ಯೇಕಞ್ಚ ॥ 4 ॥

ಇಂದ್ರಸ್ಯ ಸುಷುವಾಣಸ್ಯ ದಶಧೇಂದ್ರಿಯಂ ವೀರ್ಯಂ ಪರಾऽಪತತ್। ಸ ಯತ್ತೃಥಮನ್ನಿರಷ್ಠೀವತ್। ತತ್ಕ್ವಲಮಭವತ್। ಯದ್ದ್ವಿತೀಯಮ್। ತದ್ಬದರಮ್। ಯತ್ತೃತೀಯಮ್। ತತ್ಕರ್ಕನ್ಧು। ಯನ್ನಸ್ತಃ। ಸಸಿಗ್ಂಹಃ। ಯದಖ್ಷ್ಯೋಃ ॥ ೧೫ ॥ ಸ ಶಾರ್ದೂಲಃ। ಯತ್ಕರ್ಣಯೋಃ। ಸ ವೃಕಃ। ಯ ಊರ್ಧ್ವಃ। ಸ ಸೋಮಃ। ಯಾऽವಾಚೀ। ಸಾ ಸುರಾ। ತ್ರಯಾಸ್ಸಕ್ತವೋ ಭವಂತಿ। ಇಂದ್ರಿಯಸ್ಯಾವರುದ್ಧ್ಯೈ। ತ್ರಯಾಣಿ ಲೋಮಾನಿ ॥ ೧೬ ॥ ತ್ವಿಷಿಮೇವಾವರುನ್ಧೇ। ತ್ರಯೋ ಗ್ರಹಾಃ। ವೀರ್ಯಮೇವಾವರುನ್ಧೇ। ನಾಮ್ನಾ ದಶಮೀ। ನವ ವೈ ಪುರುಷೇ ಪ್ರಾಣಾಃ। ನಾಭಿರ್ದಶಮೀ। ಪ್ರಾಣಾ ಇಂದ್ರಿಯಂ ವೀರ್ಯಮ್। ಪ್ರಾಣಾನೇವೇಂದ್ರಿಯಂ ವೀರ್ಯಂ ಯಜಮಾನ ಆತ್ಮನ್ಧತ್ತೇ। ಸೀಸೇನ ಕ್ಲೀಬಾಚ್ಛಷ್ಪಾಣಿ ಕ್ರೀಣಾತಿ। ನ ವಾ ಏತದಯೋ ನ ಹಿರಣ್ಯಮ್ ॥ ೧೭ ॥ ಯಥ್ಸೀಸಮ್। ನ ಸ್ತ್ರೀ ನ ಪುಮಾನ್। ಯತ್ಕ್ಲೀಬಃ। ನ ಸೋಮೋ ನ ಸುರಾ। ಯಥ್ಸೌ-

ತ್ರಾಮಣೇ ಸಮ್ಯದ್ಧ್ಯೈ। ಸ್ವಾದ್ವೀಂತ್ವಾ ಸ್ವಾದುನೇತ್ಯಾಹ। ಸೋಮ-
ಮೇವೈನಾಂ ಕರೋತಿ। ಸೋಮೋಽಸ್ಯಶ್ವಿಭ್ಯಾಂ ಪಚ್ಯಸ್ವ ಸರಸ್ವತ್ಯೈ
ಪಚ್ಯಸ್ವೇಂದ್ರಾಯ ಸುತ್ರಾಮ್ಣೇ ಪಚ್ಯಸ್ವೇತ್ಯಾಹ। ಏತಾಭ್ಯೋ ಹ್ಯೇಷಾ
ದೇವತಾಭ್ಯಃ ಪಚ್ಯತೇ। ತಿಸ್ರಸ್ಸಗ್ಂಸೃಷ್ಟಾ ವಸತಿ ॥ ೧೮ ॥ ತಿಸ್ರೋ
ಹಿ ರಾತ್ರೀಃ ಕ್ರೀತಸ್ಸೋಮೋ ವಸತಿ। ಪುನಾತು ತೇ ಪರಿಸ್ರುತಮಿತಿ
ಯಜುಷಾ ಪುನಾತಿ ವ್ಯಾವೃತ್ತ್ಯೈ। ಪವಿತ್ರೇಣ ಪುನಾತಿ। ಪವಿತ್ರೇಣ ಹಿ
ಸೋಮಂ ಪುನಂತಿ। ವಾರೇಣ ಶಶ್ವತಾತನೇತ್ಯಾಹ। ವಾರೇಣ ಹಿ
ಸೋಮಂ ಪುನಂತಿ। ವಾಯುಃ ಪೂತಃ ಪವಿತ್ರೇಣೇತಿ ನೈತಯಾ ಪುನೀ-
ಯಾತ್। ವ್ಯದ್ಧಾ ಹ್ಯೇಷಾ। ಅತಿಪವಿತಸ್ಯೈತಯಾ ಪುನೀಯಾತ್।
ಕುವಿದಙ್ಗೇತ್ಯನಿರುಕ್ತಯಾ ಪ್ರಾಜಾಪತ್ಯಯಾ ಗೃಹ್ಣಾತಿ ॥ ೧೯ ॥
ಅನಿರುಕ್ತಃ ಪ್ರಜಾಪತಿಃ। ಪ್ರಜಾಪತೇರಾಪ್ತ್ಯೈ। ಏಕಯರ್ಚಾ ಗೃಹ್ಣಾತಿ।
ಏಕಧೈವ ಯಜಮಾನೇ ವೀರ್ಯಂದಧಾತಿ। ಆಶ್ವಿನಂ ಧೂಮ್ರಮಾ-
ಲಭತೇ। ಅಶ್ವಿನೌ ವೈ ದೇವಾನಾಂ ಭಿಷಜೌ। ತಾಭ್ಯಾ ಮೇವಾಸ್ಯೈ
ಭೇಷಜಂ ಕರೋತಿ। ಸಾರಸ್ವತಂ ಮೇಷಮ್। ವಾಗ್ವೈ ಸರಸ್ವತೀ।
ವಾಚೈವೈನಂ ಭಿಷಜ್ಯತಿ। ಐಂದ್ರಮೃಷಭಗ್ಂ ಸೇಂದ್ರತ್ವಾಯ ॥ ೨೦ ॥

ಅಖ್ಷ್ಯೌರ್ಲೋಮಾನಿ ಹಿರಣ್ಯಂ ವಸತಿ ಗೃಹ್ಣಾತಿ ಭಿಷಜ್ಯ-

ತ್ಯೇಕಂ ಚ ॥ 5 ॥

ಯತ್ತ್ರಿಷು ಯೂಪೇಷ್ವಾಲಭೇತ। ಬಹಿರ್ಧಾऽಸ್ಮಾದಿಂದ್ರಿಯಂ ವೀರ್ಯಂದಧ್ಯಾತ್। ಭ್ರಾತೃವ್ಯಮಸ್ಮೈ ಜನಯೇತ್। ಏಕಯೂಪ ಆಲಭತೇ। ಏಕಧೈವಾಸ್ಮಿನ್ನಿಂದ್ರಿಯಂ ವೀರ್ಯಂದಧಾತಿ। ನಾಸ್ಮೈ ಭ್ರಾತೃವ್ಯಂ ಜನಯತಿ। ನೈತೇಷಾಂ ಪಶೂನಾಂ ಪುರೋಡಾಶಾ ಭವಂತಿ। ಗ್ರಹಪುರೋಡಾಶಾ ಹ್ಯೇತೇ। ಯುವಗ್ಂ ಸುರಾಮಮಶ್ವಿನೇತಿ ಸರ್ವದೇವತ್ಯೇ ಯಾಜ್ಯಾನುವಾಕ್ಯೇ ಭವತಃ। ಸರ್ವಾ ಏವ ದೇವತಾಃ ಪ್ರೀಣಾತಿ ॥ ೨೧ ॥ ಬ್ರಾಹ್ಮಣಂ ಪರಿಕ್ರೀಣೀಯಾದುಚ್ಛೇಷಣಸ್ಯ ಪಾತಾರಮ್। ಬ್ರಾಹ್ಮಣೋ ಹ್ಯಾಹುತ್ಯಾ ಉಚ್ಛೇಷಣಸ್ಯ ಪಾತಾ। ಯದಿ ಬ್ರಾಹ್ಮಣನ್ನ ವಿಂದೇತ್। ವಲ್ಮೀಕವಪಾಯಾಮವ ನಯೇತ್। ಸೈವತತಃ ಪ್ರಾಯಶ್ಚಿತ್ತಿಃ। ಯದ್ವೈ ಸೌತ್ರಾಮಣ್ಯೈ ವ್ಯದ್ಧಮ್। ತದಸ್ಯೈ ಸಮೃದ್ಧಮ್। ನಾನಾದೇವತ್ಯಾಃ ಪಶವಶ್ಚ ಪುರೋಡಾಶಾಶ್ಚ ಭವಂತಿ ಸಮೃದ್ಧ್ಯೈ। ಐಂದ್ರಃ ಪಶೂನಾಮುತ್ತಮೋ ಭವತಿ। ಐಂದ್ರಃ ಪುರೋಡಾಶಾನಾಂ ಪ್ರಥಮಃ ॥ ೨೨ ॥ ಇಂದ್ರಿಯೇ ಏವಾಸ್ಮೈ ಸಮೀಚೀ ದಧಾತಿ। ಪುರಸ್ತಾದನೂಯಾಜಾನಾಂ ಪುರೋಡಾಶೈಃ ಪ್ರಚರತಿ। ಪಶವೋ ವೈ ಪುರೋಡಾಶಾಃ। ಪಶೂನೇವಾವರುಂಧೇ।

ಐಂದ್ರಮೇಕಾದಶಕಪಾಲನ್ನಿರ್ವಪತಿ। ಇಂದ್ರಿಯಮೇವಾವರುಂಧೇ। ಸಾವಿತ್ರಂದ್ವಾದಶಕಪಾಲಂ ಪ್ರಸೂತ್ಯೈ। ವಾರುಣಂದಶಕಪಾಲಮ್। ಅಂತತ ಏವ ವರುಣಮವ ಯಜತೇ। ವಡಬಾ ದಕ್ಷಿಣಾ ॥ ೨೩ ॥ ಉತ ವಾ ಏಷಾऽಶ್ವಗ್ಂ ಸೂತೇ। ಉತಾಶ್ವತರಮ್। ಉತ ಸೋಮ ಉತ ಸುರಾ। ಯಥೌತ್ಸಾಮಣೇ ಸಮೃದ್ಧ್ಯೈ। ಬಾರ್ಹಸ್ಪತ್ಯಂ ಪಶುಞ್ಚತುರ್ಥಮತಿಪವಿತಸ್ಯಾಲಭತೇ। ಬ್ರಹ್ಮ ವೈ ದೇವಾನಾಂ ಬೃಹಸ್ಪತಿಃ। ಬ್ರಹ್ಮಣ್ಯೈವ ಯಜ್ಞಸ್ಯ ವ್ಯದ್ಧಮಪಿ ವಪತಿ। ಪುರೋಡಾಶವಾನೇಷ ಪಶುರ್ಭವತಿ। ನ ಹ್ಯೇತಸ್ಯ ಗ್ರಹಂ ಗೃಹ್ಣಂತಿ। ಸೋಮಪ್ರತೀಕಾಃ ಪಿತರ ಸಂತೃಪ್ಯತೇತಿ ಶತಾತೃಣ್ಣಾಯಾಗ್ಂ ಸಮವನಯತಿ ॥ ೨೪ ॥ ಶತಾಯುಃ ಪುರುಷಶ್ಶತೇಂದ್ರಿಯಃ। ಆಯುಷ್ಯೇವೇಂದ್ರಿಯೇ ಪ್ರತಿತಿಷ್ಠತಿ। ದಕ್ಷಿಣೇऽಗ್ನೌ ಜುಹೋತಿ। ಪಾಪವಸ್ಯಸಸ್ಯ ವ್ಯಾವೃತ್ತ್ಯೈ। ಹಿರಣ್ಯಮಂತರಾ ಧಾರಯತಿ। ಪೂತಾಮೇವೈನಾಂ ಜುಹೋತಿ। ಶತಮಾನಂ ಭವತಿ। ಶತಾಯುಃ ಪುರುಷಶ್ಶತೇಂದ್ರಿಯಃ। ಆಯುಷ್ಯೇವೇಂದ್ರಿಯೇ ಪ್ರತಿತಿಷ್ಠತಿ। ಯತ್ರೈವ ಶತಾತೃಣ್ಣಾಧಾರಯತಿ ॥ ೨೫ ॥ ತನ್ನಿದಧಾತಿ ಪ್ರತಿಷ್ಠಿತ್ಯೈ। ಪಿತ್ಲನ್ ವಾ ಏತಸ್ಯೇಂದ್ರಿಯಂ ವೀರ್ಯಂ ಗಚ್ಛತಿ। ಯಗ್ಂ ಸೋಮೋऽತಿ ಪವತೇ।

ಪಿತೃಣಾಂ ಯಾಜ್ಯಾನುವಾಕ್ಯಾಭಿರುಪತಿಷ್ಠತೇ। ಯ ದೇವಾಸ್ಯ ಪಿತೃ-
ನಿಂದ್ರಿಯಂ ವೀರ್ಯಂ ಗಚ್ಛತಿ। ತದೇವಾವರುಂಧೇ। ತಿಸೃಭಿರುಪ-
ತಿಷ್ಠತೇ। ತೃತೀಯೇ ವಾ ಇತೋ ಲೋಕೇ ಪಿತರಃ। ತಾನೇವ
ಪ್ರೀಣಾತಿ। ಅಥೋ ತ್ರೀಣಿ ವೈ ಯಜ್ಞಸ್ಯೇಂದ್ರಿಯಾಣಿ। ಅಧ್ವರ್ಯುರ್
ಹೋತಾ ಬ್ರಹ್ಮಾ। ತ ಉಪತಿಷ್ಠಂತೇ। ಯಾನ್ಯೇವ ಯಜ್ಞಸ್ಯೇಂದ್ರಿ-
ಯಾಣಿ। ತೈ ರೇವಾಸ್ಮೈ ಭೇಷಜಂ ಕರೋತಿ ॥ ೨೬ ॥

ಪ್ರೀಣಾತಿ ಪ್ರಥಮೋ ದಕ್ಷಿಣಾ ಸಮವನಯತಿ
ಧಾರಯತೀಂದ್ರಿಯಾಣಿ ಚತ್ವಾರಿ ಚ ॥ 6 ॥

ಅಗ್ನಿಷ್ಟೋಮಮಗ್ರ ಆಹರತಿ। ಯಜ್ಞಮುಖಂ ವಾ ಅಗ್ನಿ-
ಷ್ಟೋಮಃ। ಯಜ್ಞಮುಖಮೇವಾರಭ್ಯ ಸವಮಾ ಕ್ರಮತೇ। ಅಥೈ-
ಷೋऽಭಿಷೇಚನೀಯಶ್ಚತುಸ್ತ್ರಿಗ್ಂಶಪವಮಾನೋ ಭವತಿ। ತ್ರಯ-
ಸ್ತ್ರಿಗ್ಂಶದ್ವೈ ದೇವತಾಃ। ತಾ ಏವಾಪ್ನೋತಿ। ಪ್ರಜಾಪತಿಶ್ಚತುಸ್ತ್ರಿಗ್ಂಶಃ।
ತಮೇವಾಪ್ನೋತಿ। ಸಗ್ಂಶರ ಏಷ ಸ್ತೋಮಾನಾಮ ಯಥಾ-
ಪೂರ್ವಮ್। ಯದ್ವಿಷಮಾಸ್ತೋಮಾಃ ॥ ೨೭ ॥ ಏತಾವಾನ್ ವೈ
ಯಜ್ಞಃ। ಯಾವಾನ್ಪವಮಾನಾಃ। ಅಂತಶ್ಶ್ಲೇಷಣಂತ್ವಾ ಅನ್ಯತ್।
ಯಥ್ಸಮಾಃ ಪವಮಾನಾಃ। ತೇನಾಸಗ್ಂಶರಃ। ತೇನ ಯಥಾ-

ಪೂರ್ವಮ್। ಆತ್ಮನ್ನೈವಾಗ್ನಿಷ್ಟೋಮೇನರ್ಧ್ನೋತಿ। ಆತ್ಮನಾ ಪುಣ್ಯೋ ಭವತಿ। ಪ್ರಜಾ ವಾ ಉಕ್ಥಾನಿ। ಪಶವ ಉಕ್ಥಾನಿ। ಯದುಕ್ಥ್ಯೋ ಭವತ್ಯನು ಸಂತತ್ಯೈ ॥ ೨೮ ॥

ಸ್ತೋಮಾಃ ಪಶವ ಉಕ್ಥಾನ್ಯೇಕಞ್ಚ ॥ 7 ॥

ಉಪ ತ್ವಾ ಜಾಮಯೋ ಗಿರ ಇತಿ ಪ್ರತಿಪದ್ಭವತಿ। ವಾಗ್ವೈ ವಾಯುಃ। ವಾಚ ಏವೈಷೋऽಭಿಷೇಕಃ। ಸರ್ವಾಸಾಮೇವ ಪ್ರಜಾನಾಗ್ಂ ಸೂಯತೇ। ಸರ್ವಾ ಏನಂ ಪ್ರಜಾ ರಾಜೇತಿ ವದಂತಿ। ಏತಮುತ್ಯಂದಶಖ್ಷಿಪ ಇತ್ಯಾಹ। ಆದಿತ್ಯಾ ವೈ ಪ್ರಜಾಃ। ಪ್ರಜಾನಾಮೇವೈ ತೇನ ಸೂಯತೇ। ಯಂತಿ ವಾ ಏತೇ ಯಜ್ಞಮುಖಾತ್। ಯೇ ಸಂಭಾರ್ಯಾ ಅಕ್ರನ್ ॥ ೨೯ ॥ ಯದಾಹ ಪವಸ್ವ ವಾಚೋ ಅಗ್ರಿಯ ಇತಿ। ತೇನ್ಯೈವ ಯಜ್ಞಮುಖಾನ್ನಯಂತಿ। ಅನುಷ್ಟುಕ್ಪ್ರಥಮಾ ಭವತಿ। ಅನುಷ್ಟುಗುತ್ತಮಾ। ವಾಗ್ವಾ ಅನುಷ್ಟುಕ್। ವಾಚೈವ ಪ್ರಯಂತಿ। ವಾಚೋದ್ಯಂತಿ। ಉದ್ವತೀರ್ಭವಂತಿ। ಉದ್ವದ್ವಾ ಅನುಷ್ಟುಭೋ ರೂಪಮ್। ಆನುಷ್ಟುಭೋ ರಾಜನ್ಯಃ ॥ ೩೦ ॥ ತಸ್ಮಾದುದ್ವತೀರ್ಭವಂತಿ। ಸೌರ್ಯನುಷ್ಟುಗುತ್ತಮಾ ಭವತಿ। ಸುವರ್ಗಸ್ಯ ಲೋಕಸ್ಯ ಸಂತತ್ಯೈ। ಯೋ ವೈ ಸವಾದೇತಿ। ನೈನಗ್ಂ ಸವ ಉಪನಮತಿ।

ಯಸ್ಸಾಮಭ್ಯ ಏತಿ। ಪಾಪೀಯಾನ್ಥ್ಸುವಾಣೋ ಭವತಿ। ಏತಾನಿ ಖಲು ವೈ ಸಾಮಾನಿ। ಯತ್ಪ್ಲೃಷ್ಠಾನಿ। ಯತ್ಪ್ಲೃಷ್ಠಾನಿ ಭವಂತಿ ॥ ೩೧ ॥ ತೈರೇವ ಸವಾನ್ನೈತಿ। ಯಾನಿ ದೇವರಾಜಾನಾಗ್ಂ ಸಾಮಾನಿ। ತೈರಮುಷ್ಮಿನ್ಲೋಕ ಏಧ್ನೋತಿ। ಯಾನಿ ಮನುಷ್ಯರಾಜಾನಾಗ್ಂ ಸಾಮಾನಿ। ತೈರಸ್ಮಿನ್ಲೋಕ ಏಧ್ನೋತಿ। ಉಭಯೋರೇವ ಲೋಕಯೋರ್ ಏಧ್ನೋತಿ। ದೇವಲೋಕೇ ಚ ಮನುಷ್ಯಲೋಕೇ ಚ। ಏಕವಿಗ್ಂಶೋಽಭಿಷೇಚನೀಯಸ್ಯೋತ್ತಮೋ ಭವತಿ। ಏಕವಿಗ್ಂಶಃ ಕೇಶಪನೀಯಸ್ಯ ಪ್ರಥಮಃ। ಸಪ್ತದಶೋ ದಶಪೇಯಃ ॥ ೩೨ ॥ ವಿಡ್ವಾ ಏಕವಿಗ್ಂಶಃ। ರಾಷ್ಟ್ರಗ್ಂ ಸಪ್ತದಶಃ। ವಿಶ ಏವೈ ತನ್ಮಧ್ಯತೋಽಭಿಷಿಚ್ಯತೇ। ತಸ್ಮಾದ್ವಾ ಏಷ ವಿಶಾಂ ಪ್ರಿಯಃ। ವಿಶೋ ಹಿ ಮಧ್ಯತೋಽಭಿಷಿಚ್ಯತೇ। ಯದ್ವಾ ಏನಮದೋ ದಿಶೋಽನು ವ್ಯಾಸ್ಥಾಪಯಂತಿ। ತಥ್ಸುವರ್ಗಲ್ಲೋಕಮಭ್ಯಾರೋಹತಿ। ಯದಿಮಲ್ಲೋಕನ್ನ ಪ್ರತ್ಯವರೋಹೇತ್। ಅತಿಜನಂ ವೇಯಾತ್। ಉದ್ವಾ ಮಾದ್ಯೇತ್। ಯದೇಷ ಪ್ರತೀಚೀನಸ್ತೋಮೋ ಭವತಿ। ಇಮಮೇವ ತೇನ ಲೋಕಂ ಪ್ರತ್ಯವರೋಹತಿ। ಅಥೋ ಅಸ್ಮಿನ್ನೇವ ಲೋಕೇ ಪ್ರತಿತಿಷ್ಠತ್ಯನುನ್ಮಾದಾಯ ॥ ೩೩ ॥

ಅಕ್ರನ್ನಾಜನ್ಯೋ ಭವಂತಿ ದಶಪೇಯೋ ಮಾದ್ಯೇತ್ತ್ರೀಣಿ ಚ ॥ 8 ॥

ಇಯಂ ವೈ ರಜತಾ। ಅಸೌ ಹರಿಣೇ। ಯದ್ಯುಕ್ಷ್ಣೌ ಭವತಃ। ಆಭ್ಯಾಮೇವೈನಮುಭಯತಃ ಪರಿಗೃಹ್ಣಾತಿ। ವರುಣಸ್ಯ ವಾ ಅಭಿಷಿಚ್ಯಮಾನಸ್ಯಾಪಃ। ಇಂದ್ರಿಯಂ ವೀರ್ಯಂನಿರಘ್ನನ್। ತದ್ಸುವರ್ಣಗ್ಂ ಹಿರಣ್ಯಮಭವತ್। ಯದ್ಯುಕ್ಷ್ಮಮಂತರ್ದಧಾತಿ। ಇಂದ್ರಿಯಸ್ಯ ವೀರ್ಯಸ್ಯಾನಿರ್ಘಾತಾಯ। ಶತಮಾನೋ ಭವತಿ ಶತಖ್ಸ್ಫರಃ। ಶತಾಯುಃ ಪುರುಷಶ್ಶತೇಂದ್ರಿಯಃ। ಆಯುಷ್ಯೇ-ವೇಂದ್ರಿಯೇ ಪ್ರತಿತಿಷ್ಠತಿ। ಆಯುರ್ವೈ ಹಿರಣ್ಯಮ್। ಆಯುಷ್ಯಾ ಏವೈನಮಭ್ಯತಿ ಖ್ಸ್ಫರಂತಿ। ತೇಜೋ ವೈ ಹಿರಣ್ಯಮ್। ತೇಜಸ್ಯಾ ಏವೈನಮಭ್ಯತಿ ಖ್ಸ್ಫರಂತಿ। ವರ್ಚೋ ವೈ ಹಿರಣ್ಯಮ್। ವರ್ಚಸ್ಯಾ ಏವೈನಮಭ್ಯತಿ ಖ್ಸ್ಫರಂತಿ ॥ ೩೪ ॥

ಶತಖ್ಸ್ಫರೋಽಷ್ಟೌ ಚ ॥ 9 ॥

ಅಪ್ರತಿಷ್ಠಿತೋ ವಾ ಏಷ ಇತ್ಯಾಹುಃ। ಯೋ ರಾಜಸೂಯೇನ ಯಜತ ಇತಿ। ಯದಾ ವಾ ಏಷ ಏತೇನ ದ್ವಿರಾತ್ರೇಣ ಯಜತೇ। ಅಥ ಪ್ರತಿಷ್ಠಾ। ಅಥ ಸಂವತ್ಸರಮಾಪ್ನೋತಿ। ಯಾವಂತಿ ಸಂವತ್ಸರ-

ಸ್ಯಾಹೋರಾತ್ರಾಣಿ। ತಾವತೀರೇತಸ್ಯ ಸ್ತೋತ್ರೀಯಾಃ। ಅಹೋ-
ರಾತ್ರೇಷ್ವೇವ ಪ್ರತಿತಿಷ್ಠತಿ। ಅಗ್ನಿಷ್ಟೋಮಃ ಪೂರ್ವಮಹರ್ಭವತಿ।
ಅತಿರಾತ್ರ ಉತ್ತರಮ್ ॥ ೩೫ ॥ ನಾನ್ಯೈವಾಹೋರಾತ್ರಯೋಃ ಪ್ರತಿ-
ತಿಷ್ಠತಿ। ಪೌರ್ಣಮಾಸ್ಯಾಂ ಪೂರ್ವ ಮಹರ್ಭವತಿ। ವ್ಯಷ್ಟಕಾಯಾ-
ಮುತ್ತರಮ್। ನಾನ್ಯೈವಾರ್ಧಮಾಸಯೋಃ ಪ್ರತಿತಿಷ್ಠತಿ। ಅಮಾ-
ವಾಸ್ಯಾಯಾಂ ಪೂರ್ವಮಹರ್ಭವತಿ। ಉದ್ದ್ಲುಷ್ಟ ಉತ್ತರಮ್।
ನಾನ್ಯೈವ ಮಾಸಯೋಃ ಪ್ರತಿತಿಷ್ಠತಿ। ಅಥೋ ಖಲು। ಯೇ ಏವ
ಸಮಾನಪಕ್ಷೇ ಪುಣ್ಯಾಹೇ ಸ್ಯಾತಾಮ್। ತಯೋಃ ಕಾರ್ಯಂ
ಪ್ರತಿಷ್ಠಿತ್ಯೈ ॥ ೩೬ ॥ ಅಪಶವ್ಯೋ ದ್ವಿರಾತ್ರ ಇತ್ಯಾಹುಃ। ದ್ವೇಹ್ಯೇತೇ
ಛಂದಸೀ। ಗಾಯತ್ರೀಞ್ಚ ತ್ರೈಷ್ಟುಭಞ್ಚ। ಜಗತೀಮಂತರ್ಯಂತಿ। ನ
ತೇನ ಜಗತೀ ಕೃತೇತ್ಯಾಹುಃ। ಯದೇನಾಂತೃತೀಯಸವನೇ ಕುರ್ವಂ-
ತೀತಿ। ಯದಾ ವಾ ಏಷಾऽಹೀನಸ್ಯಾಹರ್ಜತೇ। ಸಾಹ್ನಸ್ಯ ವಾ
ಸವನಮ್। ಅಥೈವ ಜಗತೀ ಕೃತಾ। ಅಥ ಪಶವ್ಯಃ। ವ್ಯುಷ್ಟಿರ್ವಾ ಏಷ
ದ್ವಿರಾತ್ರಃ। ಯ ಏವಂ ವಿದ್ವಾಂದ್ವಿರಾತ್ರೇಣ ಯಜತೇ। ವ್ಯೇವಾಸ್ಮಾ
ಉಚ್ಛತಿ। ಅಥೋತಮ ಏವಾಪಹತೇ। ಅಗ್ನಿಷ್ಟೋಮಮಂತತ ಆಹ-
ರತಿ। ಅಗ್ನಿಸ್ಸರ್ವಾ ದೇವತಾಃ। ದೇವತಾಸ್ವೇವ ಪ್ರತಿತಿಷ್ಠತಿ ॥೩೭॥

ಉತ್ತರಂ ಪ್ರತಿಷ್ಠಿತ್ಯೈ ಪಶವ್ಯಸ್ಸಪ್ತ ಚ ॥ 10 ॥

ವರುಣಸ್ಯ ಜಾಮೀಶ್ವರ ಆಗ್ನೇಯಮಿಂದ್ರಸ್ಯ ಯತ್ತ್ರಿಷ್ವಗ್ನಿ-
ಷ್ಟೋಮಮುಪ ತ್ವೇಯಂ ವೈ ರಜತಾऽಪ್ರತಿಷ್ಠಿತೋ ದಶ ॥ 10 ॥

ವರುಣಸ್ಯ ಯದಶ್ವಿಭ್ಯಾಂ ಯತ್ತ್ರಿಷು ತಸ್ಮಾದುದ್ವತೀಸ್ಸಪ್ತತ್ರಿಗ್ಂ-
ಶತ್ ॥

ವರುಣಸ್ಯ ಪ್ರತಿತಿಷ್ಠತಿ ॥ ೩೭ ॥

ಹರಿಃ ಓಮ್ ॥ ಶ್ರೀಕೃಷ್ಣಾರ್ಪಣಮಸ್ತು

ಇತಿ ಪ್ರಥಮಾಷ್ಟಕೇ ಅಷ್ಟಮಪ್ರಪಾಠಕಃ ॥

ಪ್ರಥಮಾಷ್ಟಕಶ್ಚ ಸಮಾಪ್ತಮ್ ॥

ತೈತ್ತಿರೀಯಬ್ರಾಹ್ಮಣೇ

ದ್ವಿತೀಯಾಷ್ಟಕೇ ಪ್ರಥಮಪ್ರಪಾಠಕಃ

ಹರಿಃ ಓಮ್। ಅಂಗಿರಸೋ ವೈ ಸತ್ರಮಾಸತ। ತೇಷಾಂ ಪೃಶ್ನಿರ್ಘರ್ಮಧುಗಾಸೀತ್। ಸರ್ಜೀಷೇಣಾಜೀವತ್। ತೇಽಬ್ರುವನ್। ಕಸ್ಮೈನು ಸತ್ರಮಾಸ್ಮಹೇ। ಯೇಽಸ್ಯಾ ಓಷಧೀರ್ನ ಜನಯಾಮ ಇತಿ। ತೇ ದಿವೋ ವೃಷ್ಟಿಮಸೃಜಂತ। ಯಾವಂತಸ್ಸ್ತೋಕಾ ಅವಾಪದ್ಯಂತ। ತಾವತೀರೋಷಧಯೋಽಜಾಯಂತ। ತಾ ಜಾತಾಃ ಪಿತರೋ ವಿಷೇಣಾಲಿಮ್ಪನ್ ॥ ೧ ॥ ತಾಸಾಂಜ್ಞಾಗ್ಧ್ವ ರುಪ್ಯಂತ್ಯೈತ್। ತೇಽಬ್ರುವನ್। ಕ ಇದಮಿತ್ಥಮಕರಿತಿ। ವಯಂ ಭಾಗಧೇಯಮಿಚ್ಛಮಾನಾ ಇತಿ ಪಿತರೋಽಬ್ರುವನ್। ಕಿಂ ವೋ ಭಾಗಧೇಯಮಿತಿ। ಅಗ್ನಿಹೋತ್ರ ಏವ ನೋಪ್ಯಸ್ತ್ವಿತ್ಯಬ್ರುವನ್। ತೇಭ್ಯ ಏತದ್ಭಾಗಧೇಯಂ ಪ್ರಾಯಚ್ಛನ್। ಯದ್ಧುತ್ವಾ ನಿಮಾರ್ಷ್ಟಿ। ತತೋ ವೈ ತ ಓಷಧೀರಸ್ವದಯನ್। ಯ ಏವಂ ವೇದ ॥ ೨ ॥ ಸ್ವದಂತೇಽಸ್ಮಾ ಓಷಧಯಃ। ತೇ ವಥ್ಸಮುಪಾವಾಸೃಜನ್। ಇದನ್ನೋ ಹವ್ಯಂ ಪ್ರದಾಪಯೇತಿ। ಸೋಽಬ್ರವೀದ್ವರಂ ವೃಣೈ। ದಶಮಾ ರಾತ್ರೀರ್ಜಾತನ್ನ ದೋಹನ್। ಆಸಜ್ಜವಂ

ಮಾತ್ರಾ ಸಹ ಚರಾಣೀತಿ। ತಸ್ಮಾದ್ವತ್ಸಂ ಜಾತಂದಶ ರಾತ್ರೀರ್ನ-
ದುಹಂತಿ। ಆಸಙ್ಗವಂ ಮಾತ್ರಾ ಸಹ ಚರತಿ। ವಾರೇವೃತಗ್ಗ್ಹ್ಯಸ್ಯ।
ತಸ್ಮಾದ್ವತ್ಸಗ್ಂ ಸಗ್ಂಸೃಷ್ಟಧಯಗ್ಂ ರುದ್ರೋ ಘಾತುಕಃ। ಅತಿ ಹಿ
ಸಂಧಾಂಧಯತಿ ॥ ೩ ॥

ಅಲಿಮ್ಪನ್ವೇದ ಘಾತುಕ ಏಕಂ ಚ ॥ 1 ॥

ಪ್ರಜಾಪತಿರಗ್ನಿಮಸೃಜತ। ತಂ ಪ್ರಜಾ ಅನ್ವಸೃಜ್ಯಂತ। ತಮಭಾಗ
ಉಪಾಸ್ತ। ಸೋಽಸ್ಯ ಪ್ರಜಾಭಿರಪಾಕ್ರಾಮತ್। ತಮವರುರುಧ್ಸ-
ಮಾನೋಽನ್ವೈತ್। ತಮವರುಧನ್ನಾಶಕ್ನೋತ್। ಸ ತಪೋತಪ್ಯತ।
ಸೋಽಗ್ನಿರುಪಾರಮತಾತಾಪಿ ವೈ ಸ್ಯ ಪ್ರಜಾಪತಿರಿತಿ। ಸ ರರಾಟಾ-
ದುದಮೃಷ್ಟ ॥ ೪ ॥ ತದ್ಧೃತಮ ಭವತ್। ತಸ್ಮಾದ್ಯಸ್ಯ ದಕ್ಷಿಣತಃ
ಕೇಶಾ ಉನ್ಮೃಷ್ಟಾಃ। ತಾಂ ಜ್ಯೇಷ್ಠಲಖ್ಷ್ಮೀ ಪ್ರಾಜಾಪತ್ಯೇತ್ಯಾಹುಃ।
ಯದ್ರರಾಟಾದುದಮೃಷ್ಟ। ತಸ್ಮಾದ್ರರಾಟೇ ಕೇಶಾ ನ ಸಂತಿ। ತದಗ್ನೌ
ಪ್ರಾಗೃಹ್ಣಾತ್। ತದ್ವ್ಯಚಿಕಿಥ್ಸತ್। ಜುಹವಾನೀ (೩) ಮಾ ಹೌಷಾ (೩)
ಮಿತಿ। ತದ್ವಿಚಿಕಿಥ್ಸಾಯೈ ಜನ್ಮ। ಯ ಏವಂ ವಿದ್ವಾನ್ ವಿಚಿಕಿಥ್ಸತಿ
॥ ೫ ॥ ವಸೀಯ ಏವ ಚೇತಯತೇ। ತಂ ವಾಗಭ್ಯವದಜ್ಜುಹುಧೀತಿ।
ಸೋಽಬ್ರವೀತ್। ಕಸ್ತ್ವಮಸೀತಿ। ಸ್ತ್ವೈವ ತೇ ವಾಗಿತ್ಯಬ್ರವೀತ್।

ಸೋಽಜುಹೋತ್ಸ್ವಾಹೇತಿ। ತತ್ಸ್ವಾಹಾಕಾರಸ್ಯ ಜನ್ಮ। ಯ ಏವಗ್ಂ ಸ್ವಾಹಾಕಾರಸ್ಯ ಜನ್ಮ ವೇದ। ಕರೋತಿ ಸ್ವಾಹಾಕಾರೇಣ ವೀರ್ಯಮ್। ಯಸ್ಯೈವಂ ವಿದುಷಸ್ಸ್ವಾಹಾಕಾರೇಣ ಜುಹ್ವತಿ ॥ ೬ ॥ ಭೋಗಾಯೈವಾಸ್ಯ ಹುತಂ ಭವತಿ। ತಸ್ಯಾ ಆಹುತ್ಯೈ ಪುರುಷ ಮಸೃಜತ। ದ್ವಿತೀಯಮಜುಹೋತ್। ಸೋಽಶ್ವಮಸೃಜತ। ತೃತೀಯಮಜುಹೋತ್। ಸಗಾಮಸೃಜತ। ಚತುರ್ಥಮಜುಹೋತ್। ಸೋಽವಿಮಸೃಜತ। ಪಂಚಮಮಜುಹೋತ್। ಸೋಽಜಾಮಸೃಜತ ॥ ೭ ॥ ಸೋಽಗ್ನಿರಬಿಭೇತ್। ಆಹುತೀಭಿರ್ವೈ ಮಾಽಽಪ್ನೋತೀತಿ। ಸ ಪ್ರಜಾಪತಿಂ ಪುನಃ ಪ್ರಾವಿಶತ್। ತಂ ಪ್ರಜಾಪತಿರಬ್ರವೀತ್। ಜಾಯಸ್ವೇತಿ। ಸೋಽಬ್ರವೀತ್। ಕಿಂ ಭಾಗಧೇಯಮಭಿ ಜನಿಷ್ಯ ಇತಿ। ತುಭ್ಯಮೇವೇದಗ್ಂ ಹೂಯಾತಾ ಇತ್ಯಬ್ರವೀತ್। ಸ ಏತದ್ಭಾಗಧೇಯಮಭ್ಯಜಾಯತ। ಯದಗ್ನಿ ಹೋತ್ರಮ್ ॥ ೮ ॥ ತಸ್ಮಾದಗ್ನಿಹೋತ್ರಮುಚ್ಯತೇ। ತದ್ಧೂಯಮಾನಮಾದಿತ್ಯೋಽಬ್ರವೀತ್। ಮಾ ಹೌಷೀಃ। ಉಭಯೋರ್ವೈನಾವೇತದಿತಿ। ಸೋಽಗ್ನಿರಬ್ರವೀತ್। ಕಥನ್ನೌ ಹೋಷ್ಯಂತೀತಿ। ಸಾಯಮೇವ ತುಭ್ಯಂ ಜುಹವನ್। ಪ್ರಾತರ್ಮಹ್ಯಮಿತ್ಯಬ್ರವೀತ್। ತಸ್ಮಾದಗ್ನಯೇ ಸಾಯಗ್ಂ ಹೂಯತೇ।

ಸೂರ್ಯಾಯ ಪ್ರಾತಃ ॥ ೯ ॥ ಆಗ್ನೇಯೀ ವೈ ರಾತ್ರೀಃ। ಐಂದ್ರಮಹಃ। ಯದನುದಿತೇ ಸೂರ್ಯೇ ಪ್ರಾತರ್ಜುಹುಯಾತ್। ಉಭಯಮೇವಾಗ್ನೇಯಗ್ಗ್ಸ್ಯಾತ್। ಉದಿತೇ ಸೂರ್ಯೇ ಪ್ರಾತರ್ಜುಹೋತಿ। ತಥಾऽಗ್ನಯೇ ಸಾಯಗ್ಂ ಹೂಯತೇ। ಸೂರ್ಯಾಯ ಪ್ರಾತಃ। ರಾತ್ರಿಂ ವಾ ಅನು ಪ್ರಜಾಃ ಪ್ರಜಾಯಂತೇ। ಅಹ್ನಾ ಪ್ರತಿತಿಷ್ಠಂತಿ। ಯಥ್ಸಾಯಂ ಜುಹೋತಿ ॥ ೧೦ ॥ ಪ್ರೈವ ತೇನ ಜಾಯತೇ। ಉದಿತೇ ಸೂರ್ಯೇ ಪ್ರಾತರ್ಜುಹೋತಿ। ಪ್ರತ್ಯೇವ ತೇನ ತಿಷ್ಠತಿ। ಪ್ರಜಾಪತಿರಕಾಮಯತ ಪ್ರಜಾಯೇಯೇತಿ। ಸ ಏತದಗ್ನಿಹೋತ್ರಂ ಮಿಥುನಮಪಶ್ಯತ್। ತದುದಿತೇ ಸೂರ್ಯೇऽಜುಹೋತ್। ಯಜುಷಾऽನ್ಯತ್। ತೂಷ್ಣೀಮನ್ಯತ್। ತತೋ ವೈ ಸ ಪ್ರಾಜಾಯತ। ಯಸ್ಯೈವಂ ವಿದುಷ ಉದಿತೇ ಸೂರ್ಯೇऽಗ್ನಿಹೋತ್ರಂ ಜುಹ್ವತಿ ॥ ೧೧ ॥ ಪ್ರೈವ ಜಾಯತೇ। ಅಥೋ ಯಥಾ ದಿವಾ ಪ್ರ ಜಾನನ್ನೇತಿ। ತಾದೃಗೇವ ತತ್। ಅಥೋ ಖಿಲ್ವಾಹುಃ। ಯಸ್ಯ ವೈ ದ್ವೌ ಪುಣ್ಯೌ ಗೃಹೇ ವಸತಃ। ಯಸ್ತಯೋರನ್ಯಗ್ಂ ರಾಧಯತ್ಯನ್ಯನ್ನ। ಉಭೌ ವಾವ ಸ ತಾ ವೃಚ್ಛತೀತಿ। ಅಗ್ನಿಂ ವಾ ವಾದಿತ್ಯಸ್ಸಾಯಂ ಪ್ರವಿಶತಿ। ತಸ್ಮಾದಗ್ನಿರ್ದೂರಾನ್ನಕ್ತಂದದೃಶೇ। ಉಭೇ ಹಿ ತೇಜಸೀ

ಸಂಪದ್ಯೇತೇ ॥ ೧೨ ॥ ಉದ್ಯಂತಂ ವಾವಾದಿತ್ಯಮಗ್ನಿರನು ಸಮಾ-
ರೋಹತಿ । ತಸ್ಮಾದ್ಧೂಮ ಏವಾಗ್ನೇರ್ದಿವಾ ದದೃಶೇ । ಯದಗ್ನಯೇ
ಸಾಯಂ ಜುಹುಯಾತ್ । ಆ ಸೂರ್ಯಾಯ ವೃಶ್ಚ್ಯೇತ । ಯಥ್ಸೂ-
ರ್ಯಾಯ ಪ್ರಾತರ್ಜುಹುಯಾತ್ । ಆऽಗ್ನಯೇ ವೃಶ್ಚ್ಯೇತ ।
ದೇವತಾಭ್ಯಸ್ಸಮದಂದಧ್ಯಾತ್ । ಅಗ್ನಿರ್ಜ್ಯೋತಿರ್ಜ್ಯೋತಿಸ್ಸೂರ್ಯ-
ಸ್ಸ್ವಾಹೇತ್ಯೇವ ಸಾಯಗ್ಂ ಹೋತವ್ಯಮ್ । ಸೂರ್ಯೋ ಜ್ಯೋತಿ-
ರ್ಜ್ಯೋತಿರಗ್ನಿಸ್ಸ್ವಾಹೇತಿ ಪ್ರಾತಃ । ತಥೋಭಾಭ್ಯಾಗ್ಂ ಸಾಯಗ್ಂ
ಹೂಯತೇ ॥ ೧೩ ॥ ಉಭಾಭ್ಯಾಂ ಪ್ರಾತಃ । ನ ದೇವತಾಭ್ಯಸ್ಸಮ-
ದಂದಧಾತಿ । ಅಗ್ನಿರ್ಜ್ಯೋತಿರಿತ್ಯಾಹ । ಅಗ್ನಿರ್ವೈ ರೇತೋಧಾಃ । ಪ್ರಜಾ
ಜ್ಯೋತಿರಿತ್ಯಾಹ । ಪ್ರಜಾ ಏವಾಸ್ಮೈ ಪ್ರ ಜನಯತಿ । ಸೂರ್ಯೋ
ಜ್ಯೋತಿರಿತ್ಯಾಹ । ಪ್ರಜಾಸ್ವೇವ ಪ್ರಜಾತಾಸು ರೇತೋ ದಧಾತಿ ।
ಜ್ಯೋತಿರಗ್ನಿಸ್ಸ್ವಾಹೇತ್ಯಾಹ । ಪ್ರಜಾ ಏವ ಪ್ರಜಾತಾ ಅಸ್ಯಾಂ ಪ್ರತಿ-
ಷ್ಠಾಪಯತಿ ॥ ೧೪ ॥ ತೂಷ್ಣೀಮುತ್ತರಾಮಾಹುತಿಂ ಜುಹೋತಿ ।
ಮಿಥುನತ್ವಾಯ ಪ್ರಜಾತ್ಯೈ । ಯದುದಿತೇ ಸೂರ್ಯೇ ಪ್ರಾತರ್ಜುಹು-
ಯಾತ್ । ಯಥಾऽತಿಥಯೇ ಪ್ರದ್ರುತಾಯ ಶೂನ್ಯಾಯಾವಸಥಾ-
ಯಾಹಾರ್ಯಗ್ಂ ಹರಂತಿ । ತಾದೃಗೇವ ತತ್ । ಕ್ವಾಹ ತತಸ್ತದ್ಭವತೀ-

ತ್ಯಾಹುಃ। ಯಥ್ಸ ನ ವೇದ। ಯಸ್ಮೈ ತದ್ಧರಂತೀತಿ। ತಸ್ಮಾದ್ಯದೌಷಸಂ ಜುಹೋತಿ। ತದೇವ ಸಂಪ್ರತಿ। ಅಥೋ ಯಥಾ ಪ್ರಾರ್ಧಮೌಷಸಂ ಪರಿ ವೇವೇಷ್ಟಿ। ತಾದೃಗೇವ ತತ್ ॥ ೧೫ ॥

ಅಮೃಷ್ಟ ವಿಚಿಕಿಥ್ಸತಿ ಜುಹ್ವತ್ಯಜಾಮಸೃಜತಾಗ್ನಿ ಹೋತ್ರಗ್ಂ ಸೂರ್ಯಾಯ ಪ್ರಾತರ್ಜುಹೋತಿ ಜುಹ್ವತಿ ಸಂಪದ್ಯೇತೇ ಹೂಯತೇ ಸ್ಥಾಪಯತಿ ಸಂಪ್ರತಿ ದ್ವೇ ಚ ॥ 2 ॥

ರುದ್ರೋ ವಾ ಏಷಃ। ಯದಗ್ನಿಃ। ಪತ್ನೀ ಸ್ಥಾಲೀ। ಯನ್ಮ್ರಿಯೇಽಗ್ನೇರಧಿಶ್ರಯೇತ್। ರುದ್ರಾಯ ಪತ್ನೀಮಪಿ ದಧ್ಯಾತ್। ಪ್ರಮಾಯುಕಾಸ್ಯಾತ್। ಉದೀಚೋಽಙ್ಗಾರಾನ್ನಿರೂಹ್ಯಾಧಿಶ್ರಯತಿ। ಪತ್ನಿಯೈ ಗೋಪೀಥಾಯ। ವ್ಯಂತಾನ್ಕರೋತಿ। ತಥಾ ಪ್ರತ್ನ್ಯಪ್ರಮಾಯುಕಾ ಭವತಿ ॥ ೧೬ ॥ ಘರ್ಮೋ ವಾ ಏಷೋಽಶಾಂತಃ। ಅಹರಹಃ ಪ್ರವ್ರಜ್ಯತೇ। ಯದಗ್ನಿಹೋತ್ರಮ್। ಪ್ರತಿಷಿಂಚೇತ್ಪಶುಕಾಮಸ್ಯ। ಶಾಂತಮಿವ ಹಿ ಪಶವ್ಯಮ್। ನ ಪ್ರತಿಷಿಂಚೇದ್ಬ್ರಹ್ಮವರ್ಚಸಕಾಮಸ್ಯ। ಸಮಿದ್ಧಮಿವ ಹಿ ಬ್ರಹ್ಮವರ್ಚಸಮ್। ಅಥೋ ಖಲು। ಪ್ರತಿಷಿಚ್ಯಮೇವ। ಯತ್ಪ್ರತಿಷಿಂಚತಿ ॥ ೧೭ ॥ ತತ್ಪಶವ್ಯಮ್। ಯಜ್ಜುಹೋತಿ। ತದ್ಬ್ರಹ್ಮವರ್ಚಸಿ। ಉಭಯಮೇವಾಕಃ। ಪ್ರಚ್ಯುತಂ

ವಾ ಏತದಸ್ಮಾಲ್ಲೋಕಾತ್। ಅಗತನ್ದೇವಲೋಕಮ್। ಯಚ್ಛ್ರುತಗ್ಂ
ಹವಿರನಭಿಘಾರಿತಮ್। ಅಭಿಘ್ಯೋತಯತಿ। ಅಭ್ಯೇವೈನದ್ಘಾರಯತಿ।
ಅಥೋ ದೇವತ್ರೈವೈನದ್ಗಮಯತಿ ॥ ೧೮ ॥ ಪರ್ಯಗ್ನಿ ಕರೋತಿ।
ರಕ್ಷಿಸಾಮಪಹತ್ಯೈ। ತ್ರಿಃ ಪರ್ಯಗ್ನಿ ಕರೋತಿ। ತ್ರ್ಯವೃದ್ಧಿ ಯಜ್ಞಃ।
ಅಥೋ ಮೇಧ್ಯತ್ವಾಯ। ಯತ್ಪಾಚೀನಮುದ್ವಾಸಯೇತ್। ಯಜ-
ಮಾನಗ್ಂ ಶುಚಾऽರ್ಪಯೇತ್। ಯದ್ದಕ್ಷಿಣಾ। ಪಿತೃದೇವತ್ಯಗ್ಗ್-
ಸ್ಯಾತ್। ಯತ್ತ್ಯಕ್ ॥ ೧೯ ॥ ಪತ್ನೀಗ್ಂ ಶುಚಾರ್ಪಯೇತ್। ಉದೀ-
ಚೀನಮುದ್ವಾಸಯತಿ। ಏಷಾ ವೈ ದೇವಮನುಷ್ಯಾಣಾಗ್ಂ ಶಾಂತಾ-
ದಿಕ್। ತಾಮೇವೈನದನೂದ್ವಾಸಯತಿ ಶಾಂತ್ಯೈ। ವರ್ತ್ಮ ಕರೋತಿ।
ಯಜ್ಞಸ್ಯ ಸಂತತ್ಯೈ। ನಿಷ್ಪವತಿ। ಉಪೈವ ತಥ್ಸ್ರ್ಜಾತಿ। ಚತುರುನ್ನ-
ಯತಿ। ಚತುಷ್ಪಾದಃ ಪಶವಃ ॥ ೨೦ ॥ ಪಶೂನೇವಾವರುಂಧೇ।
ಸರ್ವಾನ್ಪಾರ್ಷ್ಣಾನುನ್ನಯತಿ। ಸರ್ವೇ ಹಿ ಪುಣ್ಯಾ ರಾದ್ಧಾಃ। ಅನೂಚ
ಉನ್ನಯತಿ। ಪ್ರಜಾಯಾ ಅನೂಚೀನತ್ವಾಯ। ಅನೂಚ್ಯೇವಾಸ್ಯ
ಪ್ರಜಾऽರ್ಧುಕಾ ಭವತಿ। ಸಂ ಮೃಶತಿ ವ್ಯಾವೃತ್ತ್ಯೈ। ನಾಹೋಷ್ಯನ್ನುಪ
ಸಾದಯೇತ್। ಯದಹೋಷ್ಯನ್ನುಪ ಸಾದಯೇತ್। ಯಥಾऽನ್ಯಸ್ಮಾ
ಉಪನಿಧಾಯ ॥ ೨೧ ॥ ಅನ್ಯಸ್ಮೈ ಪ್ರಯಚ್ಛತಿ। ತಾದೃಗೇವ ತತ್।

ಆಽಸ್ಮೈ ವೃಶ್ಚ್ಯೇತ। ಯದೇವ ಗಾರ್ಹಪತ್ಯೇಽಧಿ ಶ್ರಯತಿ। ತೇ
ನಗಾರ್ಹಪತ್ಯಂ ಪ್ರೀಣಾತಿ। ಅಗ್ನಿರಬಿಭೇತ್। ಆಹುತಯೋ
ಮಾಽತ್ಯೇಷ್ಯಂತೀತಿ। ಸ ಏತಾಗ್ಂ ಸಮಿಧಮಪಶ್ಯತ್।
ತಾಮಾಽಧತ್ತ। ತತೋ ವಾ ಅಗ್ನಾವಾಹುತಯೋಽಧ್ರಿಯಂತ ॥ ೨೨ ॥
ಯದೇನಗ್ಂ ಸಮಯಚ್ಛತ್। ತಥ್ಸಮಿಧಸ್ಸಮಿತ್ತ್ವಮ್। ಸಮಿ-
ಧಮಾ ದಧಾತಿ। ಸಮೇವೈನಂ ಯಚ್ಛತಿ। ಆಹುತೀನಾಂಧೃತ್ಯೈ।
ಅಥೋ ಅಗ್ನಿಹೋತ್ರಮೇವೇಧ್ಮವತ್ಕರೋತಿ। ಆಹುತೀನಾಂ ಪ್ರತಿ-
ಷ್ಠಿತ್ಯೈ। ಬ್ರಹ್ಮವಾದಿನೋ ವದಂತಿ। ಯದೇಕಾಗ್ಂ ಸಮಿಧ-
ಮಾಧಾಯ ದ್ವೇ ಆಹುತೀ ಜುಹೋತಿ। ಅಥ ಕಸ್ಯಾಗ್ಂ ಸಮಿಧಿ
ದ್ವಿತೀಯಾಮಾಹುತಿಂ ಜುಹೋತೀತಿ ॥೨೩ ॥ ಯದ್ದ್ವೇ ಸಮಿಧಾವಾ
ದಧ್ಯಾತ್। ಭ್ರಾತೃವ್ಯಮಸ್ಮೈ ಜನಯೇತ್। ಏಕಾಗ್ಂ ಸಮಿಧ-
ಮಾಧಾಯ। ಯಜುಷಾಽನ್ಯಾಮಾಹುತಿಂ ಜುಹೋತಿ। ಉಭೇ ಏವ
ಸಮಿದ್ವತೀ ಆಹುತೀ ಜುಹೋತಿ। ನಾಸ್ಮೈ ಭ್ರಾತೃವ್ಯಂ ಜನಯತಿ। ಆ
ದೀಪ್ತಾಯಾಂ ಜುಹೋತಿ। ಸಮಿದ್ಧಮಿವ ಹಿ ಬ್ರಹ್ಮವರ್ಚಸಮ್।
ಅಥೋ ಯಥಾಽತಿಥಿಂ ಜ್ಯೋತಿಷ್ಕೃತ್ವಾ ಪರಿವೇವೇಷ್ಟಿ। ತಾದೃಗೇವ
ತತ್। ಚತುರುನ್ನಯತಿ। ದ್ವಿರ್ಜುಹೋತಿ। ತಸ್ಮಾದ್ದ್ವಿಪಾಚ್ಚತು-

ಷ್ಪಾದಮತ್ತಿ। ಅಥೋ ದ್ವಿಪದ್ಯೇವ ಚತುಷ್ಪದಃ ಪ್ರತಿಷ್ಠಾಪಯತಿ ॥೨೪॥

ಭವತಿ ಪ್ರತಿಷಿಂಚತಿ ಗಮಯತಿ ಪ್ರತ್ಯಕ್ಷಮೇವ ಉಪನಿಧಾ-
ಯಾಧ್ರಿಯಂತೇತಿ ತಚ್ಚತ್ವಾರಿ ಚ ॥ 3 ॥

ಉತ್ತರಾವತೀಂ ವೈ ದೇವಾ ಆಹುತಿ ಮಜುಹವುಃ। ಅವಾಚೀ-
ಮಸುರಾಃ। ತತೋ ದೇವಾ ಅಭವನ್। ಪರಾऽಸುರಾಃ। ಯಜ್ಕಾಮ-
ಯೇತ ವಸೀಯಾನ್ಥಾ್ಸ್ಯದಿತಿ। ಕನೀಯಸ್ತಸ್ಯ ಪೂರ್ವಗ್ಂ ಹುತ್ವಾ।
ಉತ್ತರಂ ಭೂಯೋ ಜುಹುಯಾತ್। ಏಷಾ ವಾ ಉತ್ತರಾ-
ವತ್ಯಾಹುತಿಃ। ತಾಂದೇವಾ ಅಜುಹವುಃ। ತತಸ್ತೇऽಭವನ್ ॥ ೨೫॥

ಯಸ್ಯೈವಂ ಜುಹ್ವತಿ। ಭವತ್ಯೇವ। ಯಜ್ಕಾಮಯೇತ ಪಾಪೀ-
ಯಾನ್ಥಾ್ಸ್ಯದಿತಿ। ಭೂಯಸ್ತಸ್ಯ ಪೂರ್ವಗ್ಂ ಹುತ್ವಾ। ಉತ್ತರಕ್ಕ-
ನೀಯೋ ಜುಹುಯಾತ್। ಏಷಾ ವಾ ಅವಾಚ್ಯಾಹುತಿಃ। ತಾಮಸುರಾ
ಅಜುಹವುಃ। ತತಸ್ತೇ ಪರಾऽಭವನ್। ಯಸ್ಯೈವಞ್ಜುಹ್ವತಿ। ಪರೈವ
ಭವತಿ ॥ ೨೬॥ ಹುತ್ವೋಪ ಸಾದಯತ್ಯಜಾಮಿತ್ವಾಯ। ಅಥೋ
ವ್ಯಾವೃತ್ತ್ಯೈ। ಗಾರ್ಹಪತ್ಯಂ ಪ್ರತೀಕ್ಷತೇ। ಅನನುಧ್ಯಾಯಿನಮೇವೈನ-
ಙ್ಕರೋತಿ। ಅಗ್ನಿಹೋತ್ರಸ್ಯ ವೈ ಸ್ಥಾಣುರಸ್ತಿ। ತಂ ಯ ಋಚ್ಛೇತ್।
ಯಜ್ಜಸ್ಥಾಣುಮೃಚ್ಛೇತ್। ಏಷ ವಾ ಅಗ್ನಿಹೋತ್ರಸ್ಯಸ್ಥಾಣುಃ। ಯತ್ಪೂ-

ರ್ವಾSSಹುತಿಃ। ತಾಂ ಯದುತ್ತರಯಾSಭಿ ಜುಹುಯಾತ್ ॥ ೨೭ ॥
ಯಜ್ಞಸ್ಥಾಣುಮೃಚ್ಛೇತ್। ಅತಿಹಾಯ ಪೂರ್ವಾಮಾಹುತಿ-
ಞ್ಜುಹೋತಿ। ಯಜ್ಞಸ್ಥಾಣುಮೇವ ಪರಿ ವೃಣಕ್ತಿ। ಅಥೋ ಭ್ರಾತೃವ್ಯ-
ಮೇವಾಪ್ತ್ವಾSತಿ ಕ್ರಾಮತಿ। ಅವಾಚೀನಗ್ಂ ಸಾಯಮುಪಮಾರ್ಷ್ಟಿ।
ರೇತ ಏವ ತದ್ದಧಾತಿ। ಊರ್ಧ್ವಂ ಪ್ರಾತಃ। ಪ್ರ ಜನಯತ್ಯೇವ ತತ್।
ಬ್ರಹ್ಮವಾದಿನೋ ವದಂತಿ। ಚತುರುನ್ನಯತಿ ॥೨೮॥ ದ್ವಿರ್ಜುಹೋತಿ।
ಅಥ ಕ್ವ ದ್ವೇ ಆಹುತೀ ಭವತ ಇತಿ। ಅಗ್ನೌ ವೈಶ್ವಾನರ ಇತಿ
ಬ್ರೂಯಾತ್। ಏಷ ವಾ ಅಗ್ನಿರ್ವೈಶ್ವಾನರಃ। ಯದ್ಬ್ರಾಹ್ಮಣಃ। ಹುತ್ವಾ
ದ್ವಿಃ ಪ್ರಾಶ್ನಾತಿ। ಅಗ್ನಾವೇವ ವೈಶ್ವಾನರೇ ದ್ವೇ ಆಹುತೀ ಜುಹೋತಿ।
ದ್ವಿರ್ಜುಹೋತಿ। ದ್ವಿರ್ನಿಮಾರ್ಷ್ಟಿ। ದ್ವಿಃ ಪ್ರಾಶ್ನಾತಿ ॥ ೨೯ ॥ ಷಟ್-
ಥ್ಸಂಪದ್ಯಂತೇ। ಷಡ್ವಾ ಋತವಃ। ಋತೂನೇವ ಪ್ರೀಣಾತಿ। ಬ್ರಹ್ಮ-
ವಾದಿನೋ ವದಂತಿ। ಕಿಂದೇವತ್ಯಮಗ್ನಿ ಹೋತ್ರಮಿತಿ। ವೈಶ್ವದೇವ-
ಮಿತಿ ಬ್ರೂಯಾತ್। ಯದ್ಯಜುಷಾ ಜುಹೋತಿ। ತದ್ಯೈಂದ್ರಾಗ್ನಮ್।
ಯತ್ತೂಷ್ಣೀಮ್। ತತ್ಪ್ರಾಜಾಪತ್ಯಮ್ ॥ ೩೦ ॥ ಯನ್ನಿಮಾರ್ಷ್ಟಿ।
ತದೋಷಧೀನಾಮ್। ಯದ್ದ್ವಿತೀಯಮ್। ತತ್ಪಿತೃಣಾಮ್। ಯತ್ಪ್ರಾ-
ಶ್ನಾತಿ। ತದ್ಗರ್ಭಾಣಾಮ್। ತಸ್ಮಾದ್ಗರ್ಭಾ ಅನಶ್ನಂತೋ ವರ್ಧಂತೇ।

ಯದಾಚಾಮತಿ। ತೇನ್ನುಷ್ಯಾಣಾಮ್। ಉದಙ್ವ್ಯಾವೃತ್ಯಾಚಾಮತಿ ॥ ೩೧ ॥ ಆತ್ಮನೋ ಗೋಪೀಥಾಯ। ನಿರ್ಹೀನೇಕ್ತಿ ಶುದ್ಧ್ಯೈ। ನಿಷ್ಟಪತಿ ಸ್ವಗಾಕೃತ್ಯೈ। ಉದ್ದಿಶತಿ। ಸಪ್ತರ್ಷೀನೇವ ಪ್ರೀಣಾತಿ। ದಖ್ಷಿಣಾಪರ್ಯಾವರ್ತತೇ। ಸ್ವಮೇವ ವೀರ್ಯಮನು ಪರ್ಯಾವರ್ತತೇ। ತಸ್ಮಾದ್ದಖ್ಷಿಣೋರ್ಧ ಆತ್ಮನೋ ವೀರ್ಯಾವತ್ತರಃ। ಅಥೋ ಆದಿತ್ಯಸ್ಯೈವಾವೃತಮನು ಪರ್ಯಾವರ್ತತೇ। ಹುತ್ವೋಪ ಸಮಿಂಧೇ ॥ ೩೨ ॥ ಬ್ರಹ್ಮವರ್ಚಸಸ್ಯ ಸಮಿದ್ಧ್ಯೈ। ನ ಬರ್ಹಿರನು ಪ್ರಹರೇತ್ ಅಸಗ್ಸ್ಥಿತೋ ವಾ ಏಷ ಯಜ್ಞಃ। ಯದಗ್ನಿಹೋತ್ರಮ್। ಯದನು ಪ್ರಹರೇತ್। ಯಜ್ಞಂ ವಿಚ್ಛಿಂದ್ಯಾತ್। ತಸ್ಮಾನ್ನಾನು ಪ್ರಹೃತ್ಯಮ್। ಯಜ್ಞಸ್ಯ ಸಂತತ್ಯೈ। ಅಪೋ ನಿ ನಯತಿ। ಅವಭೃಥಸ್ಯೈವ ರೂಪಮಕಃ ॥ ೩೩ ॥

ಅಭವನ್ಭವತಿ ಜುಹುಯಾನ್ನಯತಿ ಮಾರ್ಷ್ಟಿ ದ್ವಿಃ ಪ್ರಾಶ್ನಾತಿ ಪ್ರಾಜಾಪತ್ಯಮಾಚಾಮತೀಂಧೇऽಕಃ ॥ 4 ॥

ಬ್ರಹ್ಮವಾದಿನೋ ವದಂತಿ। ಅಗ್ನಿಹೋತ್ರಪ್ರಾಯಣಾ ಯಜ್ಞಾಃ। ಕಿಂಪ್ರಾಯಣಮಗ್ನಿಹೋತ್ರಮಿತಿ। ವಥ್ಸೋ ವಾ ಅಗ್ನಿಹೋತ್ರಸ್ಯ ಪ್ರಾಯಣಮ್। ಅಗ್ನಿಹೋತ್ರಂ ಯಜ್ಞಾನಾಮ್। ತಸ್ಯ ಪೃಥಿವೀ ಸದಃ।

ಅಂತರಿಕ್ಷಮಾಗ್ನೀದ್ಧ್ರಮ್। ದ್ಯೌರ್ ಹವಿರ್ಧಾನಮ್। ದಿವ್ಯಾ ಆಪಃ ಪ್ರೋಕ್ಷಣಯಃ। ಓಷಧಯೋ ಬರ್ಹಿಃ ॥ ೩೪ ॥ ವನಸ್ಪತಯ ಇಧ್ಮಃ। ದಿಶಃ ಪರಿಧಯಃ। ಆದಿತ್ಯೋ ಯೂಪಃ। ಯಜಮಾನಃ ಪಶುಃ। ಸಮುದ್ರೋಽವಭೃಥಃ। ಸಂವತ್ಸರಸ್ಯ ವ್ಯಾಕಾರಃ। ತಸ್ಮಾದಾಹಿತಾಗ್ನೇಸ್ಸರ್ವಮೇವ ಬರ್ಹಿಷ್ಯಂದತ್ತಂ ಭವತಿ। ಯಥ್ಸಾಯಂ ಜುಹೋತಿ। ರಾತ್ರಿಮೇವ ತೇನ ದಕ್ಷಿಣ್ಯಾಙ್ಕುರುತೇ। ಯತ್ಪ್ರಾತಃ ॥ ೩೫ ॥ ಅಹರೇವ ತೇನ ದಕ್ಷಿಣ್ಯಙ್ಕುರುತೇ। ಯತ್ತತೋ ದದಾತಿ। ಸಾ ದಕ್ಷಿಣಾ। ಯಾವಂತೋ ವೈ ದೇವಾ ಅಹುತಮಾದನ್। ತೇ ಪರಾಽಭವನ್। ತ ಏತದಗ್ನಿಹೋತ್ರಗ್ಂ ಸರ್ವಸ್ಯೈವ ಸಮವದಾಯಾಜುಹವುಃ। ತಸ್ಮಾದಾಹುಃ। ಅಗ್ನಿಹೋತ್ರಂ ವೈ ದೇವಾ ಗೃಹಾಣಾನ್ನಿಷ್ಕೃತಿಮಪಶ್ಯನ್ನಿತಿ। ಯಥ್ಸಾಯಞ್ಜುಹೋತಿ। ರಾತ್ರಿಯಾ ಏವ ತದ್ಧುತಾದ್ಯಾಯ ॥ ೩೬ ॥ ಯಜಮಾನಸ್ಯಾಪರಾಭಾವಾಯ। ಯತ್ಪ್ರಾತಃ। ಅಹ್ನ ಏವ ತದ್ಧುತಾದ್ಯಾಯ। ಯಜಮಾನಸ್ಯಾಪರಾಭಾವಾಯ। ಯತ್ತತೋಽಶ್ನಾತಿ। ಹುತಮೇವ ತತ್। ದ್ವಯೋಃ ಪಯಸಾ ಜುಹುಯಾತ್ಪಶುಕಾಮಸ್ಯ। ಏತದ್ವಾ ಅಗ್ನಿಹೋತ್ರಂ ಮಿಥುನಮ್। ಯ ಏವಂ ವೇದ। ಪ್ರ ಪ್ರಜಯಾ ಪಶುಭಿರ್ಮಿಥುನೈ-

ರ್ಜಾಯತೇ ॥ ೩೭ ॥ ಇಮಾಮೇವ ಪೂರ್ವಯಾ ದುಹೇ । ಅಮೂ-
ಮುತ್ತರಯಾ । ಅಧಿಶ್ರಿತ್ಯೋತ್ತರಮಾನಯತಿ । ಯೋನಾವೇವ
ತದ್ರೇತಸ್ಸಿಞ್ಚತಿ ಪ್ರಜನನೇ । ಆಜ್ಯೇನ ಜುಹುಯಾತ್ತೇಜಸ್ಕಾಮಸ್ಯ ।
ತೇಜೋ ವಾ ಆಜ್ಯಮ್ । ತೇಜಸ್ವ್ಯೇವ ಭವತಿ । ಪಯಸಾ ಪಶು-
ಕಾಮಸ್ಯ । ಏತದ್ವೈ ಪಶೂನಾಗ್ಂ ರೂಪಮ್ । ರೂಪೇಣೈವಾಸ್ಮೈ
ಪಶೂನವರುಂಧೇ ॥ ೩೮ ॥ ಪಶುಮಾನೇವ ಭವತಿ । ದಧ್ನೇಂದ್ರಿಯ-
ಕಾಮಸ್ಯ । ಇಂದ್ರಿಯಂ ವೈ ದಧಿ । ಇಂದ್ರಿಯಾವ್ಯೇವ ಭವತಿ ।
ಯವಾಗ್ವಾ ಗ್ರಾಮಕಾಮಸ್ಯೌಷಧಾ ವೈ ಮನುಷ್ಯಾಃ । ಭಾಗಧೇಯೇ-
ನೈವಾಸ್ಮೈ ಸಜಾತಾನವರುಂಧೇ । ಗ್ರಾಮ್ಯೇವ ಭವತಿ । ಅಯಜ್ಞೋ
ವಾ ಏಷಃ । ಯೋಽಸಾಮಾ ॥ ೩೯ ॥ ಚತುರುನ್ನಯತಿ । ಚತುರ-
ಕ್ಷಿರಗ್ಂ ರಥಂತರಮ್ । ರಥಂತರಸ್ಯೈಷ ವರ್ಣಃ । ಉಪರೀವ
ಹರತಿ । ಅಂತರಿಕ್ಷಂ ವಾಮದೇವ್ಯಮ್ । ವಾಮದೇವ್ಯಸ್ಯೈಷ ವರ್ಣಃ ।
ದ್ವಿರ್ಜುಹೋತಿ । ದ್ವ್ಯಕ್ಷಿರಂ ಬೃಹತ್ । ಬೃಹತ ಏಷ ವರ್ಣಃ । ಅಗ್ನಿ-
ಹೋತ್ರಮೇವ ತಥಾ ಸಮನ್ವತ್ಕರೋತಿ ॥ ೪೦ ॥ ಯೋ ವಾ ಅಗ್ನಿ-
ಹೋತ್ರಸ್ಯೋಪಸದೋ ವೇದ । ಉಪೈನಮುಪಸದೋ ನಮಂತಿ ।
ವಿಂದತ ಉಪಸತ್ತಾರಮ್ । ಉನ್ನೀಯೋಪ ಸಾದಯತಿ । ಪೃಥಿವೀ-

ಮೇವ ಪ್ರೀಣಾತಿ। ಹೋಷ್ಯನ್ನುಪ ಸಾದಯತಿ। ಅಂತರಿಕ್ಷಮೇವ ಪ್ರೀಣಾತಿ। ಹುತ್ವೋಪ ಸಾದಯತಿ। ದಿವಮೇವ ಪ್ರೀಣಾತಿ। ಏತಾ ವಾ ಅಗ್ನಿಹೋತ್ರಸ್ಯೋಪಸದಃ ॥ ೪೧॥ ಯ ಏವಂ ವೇದ। ಉಪೈನಮುಪಸದೋ ನಮಂತಿ। ವಿಂದತ ಉಪಸತ್ತಾರಮ್। ಯೋ ವಾ ಅಗ್ನಿಹೋತ್ರಸ್ಯಾಶ್ರಾವಿತಂ ಪ್ರತ್ಯಾಶ್ರಾವಿತಗ್ಂ ಹೋತಾರಂ ಬ್ರಹ್ಮಾಣಂ ವಷಟ್ಕಾರಂ ವೇದ। ತಸ್ಯತ್ವೇವ ಹುತಮ್। ಪ್ರಾಣೋ ವಾ ಅಗ್ನಿಹೋತ್ರಸ್ಯಾಶ್ರಾವಿತಮ್। ಅಪಾನಃ ಪ್ರತ್ಯಾಶ್ರಾವಿತಮ್। ಮನೋ ಹೋತಾ। ಚಕ್ಷುರ್ಬ್ರಹ್ಮಾ। ನಿಮೇಷೋ ವಷಟ್ಕಾರಃ ॥ ೪೨॥ ಯ ಏವಂ ವೇದ। ತಸ್ಯ ತ್ವೇವ ಹುತಮ್। ಸಾಯಂ ಯಾವಾನಶ್ಚ ವೈ ದೇವಾಃ ಪ್ರಾತರ್ಯಾವಾಣಶ್ಚಾಗ್ನಿ ಹೋತ್ರಿಣೋ ಗೃಹಮಾಗಚ್ಛಂತಿ। ತಾನ್ ಯನ್ನ ತರ್ಪಯೇತ್। ಪ್ರಜಯಾऽಸ್ಯ ಪಶುಭಿರ್ವಿತಿಷ್ಠೇರನ್। ಯತ್ತರ್ಪಯೇತ್। ತೃಪ್ತಾ ಏನಂ ಪ್ರಜಯಾ ಪಶುಭಿಸ್ತರ್ಪಯೇಯುಃ। ಸಜೂರ್ದೇವೈಸ್ಸಾಯಂಯಾವಭಿರಿತಿ ಸಾಯಗ್ಂ ಸಂಮೃಶತಿ। ಸಜೂರ್ದೇವೈಃ ಪ್ರಾತರ್ಯಾವಭಿರಿತಿ ಪ್ರಾತಃ। ಯೇ ಚೈವ ದೇವಾ-ಸ್ಸಾಯಂ ಯಾವಾನೋ ಯೇ ಚ ಪ್ರಾತರ್ಯಾವಾಣಃ ॥ ೪೩॥ ತಾನೇವೋಭಯಾಗ್ಂಸ್ತರ್ಪಯತಿ। ತ ಏನಂ ತೃಪ್ತಾಃ ಪ್ರಜಯಾ

ಪಶುಭಿಸ್ತರ್ಪಯಂತಿ। ಅರುಣೋ ಹ ಸ್ಮಾಹೌಪವೇಶಿಃ। ಅಗ್ನಿಹೋತ್ರ ಏವಾಹಗ್ಂ ಸಾಯಂ ಪ್ರಾತರ್ವಜ್ರಂ ಭ್ರಾತೃವ್ಯೇಭ್ಯಃ ಪ್ರ ಹರಾಮಿ। ತಸ್ಮಾನ್ಮತ್ಪಾಪೀಯಾಗ್ಂಸೋ ಭ್ರಾತೃವ್ಯಾ ಇತಿ। ಚತುರುನ್ನಯತಿ। ದ್ವಿರ್ಜುಹೋತಿ। ಸಮಿಧ್ಸಪ್ತಮೀ। ಸಪ್ತಪದಾ ಶಕ್ವರೀ। ಶಾಕ್ವರೋ ವಜ್ರಃ। ಅಗ್ನಿಹೋತ್ರ ಏವ ತಥ್ಸಾಯಂ ಪ್ರಾತರ್ವಜ್ರಂ ಯಜಮಾನೋ ಭ್ರಾತೃವ್ಯಾಯ ಪ್ರ ಹರತಿ। ಭವತ್ಯಾತ್ಮನಾ। ಪರಾऽಸ್ಯ ಭ್ರಾತೃವ್ಯೋ ಭವತಿ ॥ ೪೪ ॥

ಬರ್ಹಿಃ ಪ್ರಾತರ್ ಹುತಾದ್ಯಾಯ ಜಾಯತೇ ರುಂಧೇ ಸಾಮಾ ಕರೋತ್ಯೇತಾ ವಾ ಅಗ್ನಿಹೋತ್ರಸ್ಯೋಪಸದೋ ವಷಟ್ಕಾರಶ್ಚ ಪ್ರಾತರ್ಯಾವಾಣೋ ವಜ್ರಸ್ತ್ರೀಣಿ ಚ ॥ 5 ॥

ಪ್ರಜಾಪತಿರಕಾಮಯತಾತ್ಮನ್ವನ್ಮೇ ಜಾಯೇತೇತಿ। ಸೋऽಜುಹೋತ್। ತಸ್ಯಾತ್ಮನ್ವದಜಾಯತ। ಅಗ್ನಿರ್ವಾಯುರಾದಿತ್ಯಃ। ತೇऽಬ್ರುವನ್। ಪ್ರಜಾಪತಿರಹೌಷೀದಾತ್ಮನ್ವನ್ಮೇ ಜಾಯೇತೇತಿ। ತಸ್ಯ ವಯಮಜನಿಷ್ಮಹಿ। ಜಾಯತಾನ್ನ ಆತ್ಮನ್ವದಿತಿ ತೇऽಜುಹವುಃ। ಪ್ರಾಣಾನಾಮಗ್ನಿಃ। ತನುವೈ ವಾಯುಃ ॥ ೪೫ ॥ ಚಕ್ಷುಷ ಆದಿತ್ಯಃ। ತೇಷಾಗ್ಂ ಹುತಾದಜಾಯತ ಗೌರೇವ। ತಸ್ಯೈ ಪಯಸಿ ವ್ಯಾಯ-

ಚ್ಛಂತ। ಮಮ ಹುತಾದಜನಿ ಮಮೇತಿ। ತೇ ಪ್ರಜಾಪತಿಂ ಪ್ರಶ್ನ-
ಮಾಯನ್। ಸ ಆದಿತ್ಯೋಽಗ್ನಿಮಬ್ರವೀತ್। ಯತರೋ ನೌ
ಜಯಾತ್। ತನ್ನೌ ಸಹಾಸದಿತಿ। ಕಸ್ಯೈಕೋಽಹೌಷೀದಿತಿ ಪ್ರಜಾಪತಿ-
ರಬ್ರವೀತ್ಕಸ್ಯೈಕ ಇತಿ। ಪ್ರಾಣಾನಾಮಹಮಿತ್ಯಗ್ನಿಃ ॥ ೪೬ ॥ ತನುವಾ
ಅಹಮಿತಿ ವಾಯುಃ। ಚಕ್ಷುಷೋಽಹಮಿತ್ಯಾದಿತ್ಯಃ। ಯ ಏವ
ಪ್ರಾಣಾನಾಮಹೌಷೀತ್। ತಸ್ಯ ಹುತಾದಜನೀತಿ। ಅಗ್ನೇರ್ ಹುತಾದ-
ಜನೀತಿ। ತದಗ್ನಿಹೋತ್ರಸ್ಯಾಗ್ನಿಹೋತ್ರತ್ವಮ್। ಗೌರ್ವಾ ಅಗ್ನಿ-
ಹೋತ್ರಮ್। ಯ ಏವಂ ವೇದ ಗೌರಗ್ನಿ ಹೋತ್ರಮಿತಿ। ಪ್ರಾಣಾ-
ಪಾನಾಭ್ಯಾಮೇವಾಗ್ನಿಗ್ಂ ಸಮರ್ಧಯತಿ। ಅವ್ಯರ್ಧುಕಃ ಪ್ರಾಣಾ-
ಪಾನಾಭ್ಯಾಂ ಭವತಿ ॥ ೪೭ ॥ ಯ ಏವಂ ವೇದ। ತೌ ವಾಯುರ-
ಬ್ರವೀತ್। ಅನು ಮಾ ಭಜತಮಿತಿ। ಯದೇವ ಗಾರ್ಹಪತ್ಯೇಽಧಿ-
ಶ್ರಿತ್ಯಾಹವನೀಯಮಭ್ಯುದ್ರವಾನ್। ತೇನ ತ್ವಾಂ ಪ್ರೀಣಾನಿತ್ಯ
ಬ್ರೂತಾಮ್। ತಸ್ಮಾದ್ಯದ್ಗಾರ್ಹಪತ್ಯೇಽಧಿಶ್ರಿತ್ಯಾಹವನೀಯಮಭ್ಯು-
ದ್ರವತಿ। ವಾಯುಮೇವ ತೇನ ಪ್ರೀಣಾತಿ। ಪ್ರಜಾಪತಿರ್ದೇವತಾ-
ಸ್ಸೃಜಮಾನಃ। ಅಗ್ನಿಮೇವ ದೇವತಾನಾಂ ಪ್ರಥಮಮಸೃಜತ।
ಸೋಽನ್ಯದಾಲಂಭ್ಯಮವಿತ್ವಾ ॥ ೪೮ ॥ ಪ್ರಜಾಪತಿಮಭಿ ಪರ್ಯಾ-

ವರ್ತತ। ಸಮೃತ್ಯೋರಬಿಭೇತ್। ಸೋऽಮುಮಾದಿತ್ಯಮಾತ್ಮನೋ
ನಿರಮಿಮೀತ। ತಗ್ಂ ಹುತ್ವಾ ಪರಾಙ್ಪ್ರಯಾರ್ವಾವರ್ತತ। ತತೋ ವೈ ಸ
ಮೃತ್ಯುಮಪಾಜಯತ್। ಅಪ ಮೃತ್ಯುಞ್ಜಯತಿ। ಯ ಏವಂ ವೇದ।
ತಸ್ಮಾದ್ಯಸ್ಯೈವಂ ವಿದುಷಃ। ಉತೈಕಾಹಮುತ ದ್ವ್ಯಹನ್ನ ಜುಹ್ವತಿ।
ಹುತಮೇವಾಸ್ಯ ಭವತಿ। ಅಸೌ ಹ್ಯಾದಿತ್ಯೋऽಗ್ನಿಹೋತ್ರಮ್ ॥ ೪೯ ॥

ತನುವೈ ವಾಯುರಗ್ನಿರ್ಭವತ್ಯವಿತ್ವಾ ಭವತ್ಯೇಕಞ್ಚ ॥ 6 ॥

ರೌದ್ರಜ್ಗವಿ। ವಾಯವ್ಯಮುಪಸೃಷ್ಟಮ್। ಆಶ್ವಿನಂದುಹ್ಯ-
ಮಾನಮ್। ಸೌಮ್ಯಂದುಗ್ಧಮ್। ವಾರುಣಮಧಿ ಶ್ರಿತಮ್। ವೈಶ್ವ-
ದೇವಾ ಭಿಂದವಃ। ಪೌಷ್ಣಮುದಂತಮ್। ಸಾರಸ್ವತಂ ವಿಷ್ಯಂದ-
ಮಾನಮ್। ಮೈತ್ರಗ್ಂ ಶರಃ। ಧಾತುರುದ್ವಾಸಿತಮ್। ಬೃಹಸ್ಪತೇ-
ರುನ್ನೀತಮ್। ಸವಿತುಃ ಪ್ರಕ್ರಾಂತಮ್। ದ್ಯಾವಾಪೃಥಿವ್ಯಗ್ಂಹ್ರಿಯ-
ಮಾಣಮ್। ಐಂದ್ರಾಗ್ನಮುಪಸನ್ನಮ್। ಅಗ್ನೇಃ ಪೂರ್ವಾऽऽಹುತಿಃ।
ಪ್ರಜಾಪತೇರುತ್ತರಾ। ಐಂದ್ರಗ್ಂ ಹುತಮ್ ॥ ೫೦ ॥

ಉದ್ವಾಸಿತಗ್ಂ ಸಪ್ತ ಚ ॥ 7 ॥

ದಕ್ಷಿಣತ ಉಪ ಸೃಜತಿ। ಪಿತೃಲೋಕಮೇವ ತೇನ ಜಯತಿ।
ಪ್ರಾಚೀಮಾವರ್ತಯತಿ। ದೇವಲೋಕಮೇವ ತೇನ ಜಯತಿ।

ಉದೀಚೀಮಾವೃತ್ಯ ದೋಗ್ಧಿ। ಮನುಷ್ಯಲೋಕಮೇವ ತೇನ ಜಯತಿ।
ಪೂರ್ವೌ ದುಹ್ಯಾಜ್ಜ್ಯೇಷ್ಠಸ್ಯ ಜ್ಯೈಷ್ಠಿನೇಯಸ್ಯ। ಯೋ ವಾ ಗತಶ್ರೀ-
ಸ್ಸ್ಯಾತ್। ಅಪರೌದುಹ್ಯಾತ್ಕನಿಷ್ಠಸ್ಯ ಕಾನಿಷ್ಠಿನೇಯಸ್ಯ। ಯೋ ವಾ
ಬುಭೂಷೇತ್ ॥ ೫೧ ॥ ನ ಸಂ ಮೃಶತಿ। ಪಾಪವಸ್ಯಸಸ್ಯ ವ್ಯಾವೃತ್ತ್ಯೈ।
ವಾಯವ್ಯಂ ವಾ ಏತದುಪಸೃಷ್ಟಮ್। ಆಶ್ವಿನಂದುಹ್ಯಮಾನಮ್।
ಮೈತ್ರದುಗ್ಧಮ್। ಅರ್ಯಮ್ಣ ಉದ್ವಾಸ್ಯಮಾನಮ್। ತ್ವಾಷ್ಟ್ರಂ-
ಮುನ್ನೀಯಮಾನಮ್। ಬೃಹಸ್ಪತೇರುನ್ನೀತಮ್। ಸವಿತುಃ ಪ್ರಕ್ರಾಂ-
ತಮ್। ದ್ಯಾವಾಪೃಥಿವ್ಯೋರ್ಗೃಹ್ಯಮಾಣಮ್ ॥ ೫೨ ॥ ಐಂದ್ರಾಗ್ನ-
ಮುಪ ಸಾದಿತಮ್। ಸರ್ವಾಭ್ಯೋ ವಾ ಏಷ ದೇವತಾಭ್ಯೋ
ಜುಹೋತಿ। ಯೋಽಗ್ನಿಹೋತ್ರಂ ಜುಹೋತಿ। ಯಥಾ ಖಲು ವೈ
ಧೇನುಂತೀರ್ಥೇ ತರ್ಪಯತಿ। ಏವಮಗ್ನಿಹೋತ್ರೀ ಯಜಮಾನಂ-
ತರ್ಪಯತಿ। ತೃಪ್ಯತಿ ಪ್ರಜಯಾ ಪಶುಭಿಃ। ಪ್ರ ಸುವರ್ಗಲ್ಲೋಕ-
ಞ್ಜಾನಾತಿ। ಪಶ್ಯತಿ ಪುತ್ರಮ್। ಪಶ್ಯತಿ ಪೌತ್ರಮ್। ಪ್ರ ಪ್ರಜಯಾ
ಪಶುಭಿರ್ಮಿಥುನೈರ್ಜಾಯತೇ। ಯಸ್ಯೈವಂ ವಿದುಷೋಽಗ್ನಿಹೋತ್ರಂ
ಜುಹ್ವತಿ। ಯ ಉ ಚೈನದೇವಂ ವೇದ ॥ ೫೩ ॥

ಬುಭೂಷೇದ್ಧ್ರಿಯಮಾಣಂ ಜಾಯತೇ ದ್ವೇ ಚ ॥ 8 ॥

ತ್ರಯೋ ವೈ ಪ್ರೈಯ್ನಮೇಧಾ ಆಸನ್। ತೇಷಾಂತ್ರಿರೇಕೋಽಗ್ನಿ
ಹೋತ್ರಮಜುಹೋತ್। ದ್ವಿರೇಕಃ। ಸಕೃದೇಕಃ। ತೇಷಾಂ ಯಸ್ತ್ರಿರ-
ಜುಹೋತ್। ಸ ಋಚಾಽಜುಹೋತ್। ಯೋ ದ್ವಿಃ। ಸ ಯಜುಷಾ।
ಯಸ್ಸಕೃತ್। ಸ ತೂಷ್ಣೀಮ್ ॥ ೫೪ ॥ ಯಶ್ಚ ಯಜುಷಾಽ-
ಜುಹೋದ್ಯಶ್ಚ ತೂಷ್ಣೀಮ್। ತಾವುಭಾವಾರ್ಧ್ನುತಾಮ್। ತಸ್ಮಾದ್ಯ-
ಜುಷಾऽऽಹುತಿಃ ಪೂರ್ವಾ ಹೋತವ್ಯಾ। ತೂಷ್ಣೀಮುತ್ತರಾ। ಉಭೇ
ಏವರ್ದ್ಧೀ ಅವರುಂಧೇ। ಅಗ್ನಿರ್ಜ್ಯೋತಿರ್ಜ್ಯೋತಿರಗ್ನಿಸ್ವಾಹೇತಿ
ಸಾಯಮ್ಜುಹೋತಿ। ರೇತ ಏವ ತದ್ದಧಾತಿ। ಸೂರ್ಯೋ ಜ್ಯೋತಿ-
ರ್ಜ್ಯೋತಿಸ್ಸೂರ್ಯಸ್ವಾಹೇತಿ ಪ್ರಾತಃ। ರೇತ ಏವ ಹಿತಂ ಪ್ರ
ಜನಯತಿ। ರೇತೋ ವಾ ಏತಸ್ಯ ಹಿತನ್ನ ಪ್ರಜಾಯತೇ ॥ ೫೫ ॥
ಯಸ್ಯಾಗ್ನಿಹೋತ್ರಮಹುತಗ್ಂ ಸೂರ್ಯೋಽಭ್ಯುದೇತಿ। ಯದ್ಯಂತೇ
ಸ್ಯಾತ್। ಉನ್ನೀಯ ಪ್ರಾಙುದಾದ್ರವೇತ್। ಸ ಉಪಸಾದ್ಯಾತಮಿತೋ
ರಾಸೀತ। ಸ ಯದಾ ತಾಮ್ಯೇತ್। ಅಥ ಭೂಸ್ವಾಹೇತಿ ಜುಹು-
ಯಾತ್। ಪ್ರಜಾಪತಿರ್ವೈ ಭೂತಃ। ತಮೇವೋಪಾಸರತ್। ಸ
ಏವೈನಂತತ ಉನ್ನಯತಿ। ನಾರ್ತಿಮಾರ್ಚ್ಛತಿ ಯಜಮಾನಃ ॥ ೫೬ ॥

ತೂಷ್ಣೀಂ ಜಾಯತೇ ಯಜಮಾನಃ ॥ 9 ॥

ಯದಗ್ನಿಮುದ್ಧರತಿ। ವಸವಸ್ತರ್ಹ್ಯಗ್ನಿಃ। ತಸ್ಮಿನ್ ಯಸ್ಯ ತಥಾವಿಧೇ ಜುಹ್ವತಿ। ವಸುಷ್ಟೇವಾಸ್ಯಾಗ್ನಿಹೋತ್ರಗ್ಂ ಹುತಂ ಭವತಿ। ನಿಹಿತೋ ಧೂಪಾಯಞ್ಛ್ವೇತೇ। ರುದ್ರಾಸ್ತರ್ಹ್ಯಗ್ನಿಃ। ತಸ್ಮಿನ್ ಯಸ್ಯ ತಥಾವಿಧೇ ಜುಹ್ವತಿ। ರುದ್ರೇಷ್ಟೇವಾಸ್ಯಾಗ್ನಿಹೋತ್ರಗ್ಂ ಹುತಂ ಭವತಿ। ಪ್ರಥಮಮಿಧ್ಮಮರ್ಚಿರಾ ಲಭತೇ। ಆದಿತ್ಯಾಸ್ತರ್ಹ್ಯಗ್ನಿಃ ॥ ೫೭ ॥

ತಸ್ಮಿನ್ ಯಸ್ಯ ತಥಾವಿಧೇ ಜುಹ್ವತಿ। ಆದಿತ್ಯೇ ಷ್ಟೇವಾಸ್ಯಾಗ್ನಿಹೋತ್ರಗ್ಂ ಹುತಂ ಭವತಿ। ಸರ್ವ ಏವ ಸರ್ವಶ ಇಧ್ಮ ಆದೀಪ್ತೋ ಭವತಿ। ವಿಶ್ವೇ ದೇವಾಸ್ತರ್ಹ್ಯಗ್ನಿಃ। ತಸ್ಮಿನ್ ಯಸ್ಯ ತಥಾವಿಧೇ ಜುಹ್ವತಿ। ವಿಶ್ವೇಷ್ಟೇವಾಸ್ಯ ದೇವೇಷ್ವಗ್ನಿಹೋತ್ರಗ್ಂ ಹುತಂ ಭವತಿ। ನಿತರಾಮರ್ಚಿರುಪಾವೈತಿ ಲೋಹಿನೀಕೇವ ಭವತಿ। ಇಂದ್ರಸ್ತರ್ಹ್ಯಗ್ನಿಃ। ತಸ್ಮಿನ್ ಯಸ್ಯ ತಥಾವಿಧೇ ಜುಹ್ವತಿ। ಇಂದ್ರ ಏವಾಸ್ಯಾಗ್ನಿಹೋತ್ರಗ್ಂ ಹುತಂ ಭವತಿ ॥ ೫೮ ॥ ಅಙ್ಗಾರಾ ಭವಂತಿ। ತೇಭ್ಯೋಽಙ್ಗಾರೇಭ್ಯೋಽರ್ಚಿರುದೇತಿ। ಪ್ರಜಾಪತಿಸ್ತರ್ಹ್ಯಗ್ನಿಃ। ತಸ್ಮಿನ್ ಯಸ್ಯ ತಥಾವಿಧೇ ಜುಹ್ವತಿ। ಪ್ರಜಾಪತಾವೇವಾಸ್ಯಾಗ್ನಿಹೋತ್ರಗ್ಂ ಹುತಂ ಭವತಿ। ಶರೋಙ್ಗಾರಾ ಅಧ್ಯೂಹಂತೇ। ಬ್ರಹ್ಮ ತರ್ಹ್ಯಗ್ನಿಃ। ತಸ್ಮಿನ್ ಯಸ್ಯ

ತಥಾವಿಧೇ ಜುಹ್ವತಿ। ಬ್ರಹ್ಮನ್ನೇವಾಸ್ಯಾಗ್ನಿಹೋತ್ರಗ್ಂ ಹುತಂ ಭವತಿ। ವಸುಷು ರುದ್ರೇಷ್ವಾದಿತ್ಯೇಷು ವಿಶ್ವೇಷು ದೇವೇಷು। ಇಂದ್ರೇ ಪ್ರಜಾಪತೌ ಬ್ರಹ್ಮನ್। ಅಪರಿವರ್ಗಮೇವಾಸ್ಯೈತಾಸು ದೇವತಾಸು ಹುತಂ ಭವತಿ। ಯಸ್ಯೈವಂ ವಿದುಷೋಽಗ್ನಿಹೋತ್ರಂ ಜುಹ್ವತಿ। ಯ ಉ ಚೈನದೇವಂ ವೇದ ॥ ೫೯ ॥

ಆದಿತ್ಯಾಸ್ತರ್ಹ್ಯಗ್ನಿರಿಂದ್ರ ಏವಾಸ್ಯಾಗ್ನಿಹೋತ್ರಗ್ಂ ಹುತಂ ಭವತಿ ದೇವೇಷು ಚತ್ವಾರಿ ಚ ॥ 10 ॥

ಯದಗ್ನಿನ್ನಿಹಿತಃ ಪ್ರಥಮಗ್ಂ ಸರ್ವ ಏವ ನಿತರಾಮಙ್ಗಾರಾಶ್ಯರೋಽಙ್ಗಾರಾ ಬ್ರಹ್ಮವಸುಷ್ವಷ್ಟೌ ॥

ಋತಂತ್ವಾ ಸತ್ಯೇನ ಪರಿಷಿಞ್ಚಾಮೀತಿ ಸಾಯಂ ಪರಿಷಿಞ್ಚತಿ। ಸತ್ಯಂತ್ವರ್ತೇನ ಪರಿಷಿಞ್ಚಾಮೀತಿ ಪ್ರಾತಃ। ಅಗ್ನಿರ್ವಾ ಋತಮ್। ಅಸಾವಾದಿತ್ಯಸ್ಸತ್ಯಮ್। ಅಗ್ನಿಮೇವ ತದಾದಿತ್ಯೇನ ಸಾಯಂ ಪರಿಷಿಞ್ಚತಿ। ಅಗ್ನಿನಾऽऽದಿತ್ಯಂ ಪ್ರಾತಸ್ಸಃ। ಯಾವದಹೋರಾತ್ರೇ ಭವತಃ। ತಾವದಸ್ಯ ಲೋಕಸ್ಯ। ನಾರ್ತಿರ್ನರಿಷ್ಟಿಃ। ನಾಂತೋ ನ ಪರ್ಯಂತೋऽಸ್ತಿ। ಯಸ್ಯೈವಂ ವಿದುಷೋಽಗ್ನಿಹೋತ್ರಂ ಜುಹ್ವತಿ। ಯ ಉ ಚೈನದೇವಂ ವೇದ ॥ ೬೦ ॥

ಅಸ್ತಿ ದ್ವೇ ಚ ॥ 11 ॥

ಅಙ್ಗಿರಸಃ ಪ್ರಜಾಪತಿರಗ್ನಿಗ್ಂ ರುದ್ರ ಉತ್ತರಾವತೀಂ ಬ್ರಹ್ಮವಾದಿನೋಽಗ್ನಿ ಹೋತ್ರಪ್ರಾಯಣಾ ಯಜ್ಞಾಃ ಪ್ರಜಾಪತಿರ-ಕಾಮಯ ತಾತ್ಮನ್ವದ್ರೌದ್ರಂ ಗವಿ ದಖ್ಷಿಣತಸ್ತ್ರಯೋ ವೈ ಯದಗ್ನಿಮ್ಯತಂ ತ್ವಾ ಸತ್ಯೇನೈಕಾದಶ ॥ 11 ॥

ಅಙ್ಗಿರಸಃ ಪ್ರೈವ ತೇನ ಪಶೂನೇವ ಯನ್ನಿಮಾರ್ಷ್ಟಿ ಯೋ ವಾ ಅಗ್ನಿಹೋತ್ರ ಸ್ಯೋಪಸದೋ ದಖ್ಷಿಣತಷ್ಷಷ್ಟಿಃ ॥ ೬೦ ॥

ಅಙ್ಗಿರಸೋ ಯ ಉ ಚೈನದೇವಂ ವೇದ ॥

ಹರಿಃ ಓಮ್ ॥ ಶ್ರೀ ಕೃಷ್ಣಾರ್ಪಣಮಸ್ತು ॥

ಇತಿ ದ್ವಿತೀಯಾಷ್ಟಕೇ ಪ್ರಥಮಪ್ರಪಾಠಕಃ ॥

ದ್ವಿತೀಯಾಷ್ಟಕೇ ದ್ವಿತೀಯಪ್ರಪಾಠಕಃ

ಹರಿಃ ಓಮ್ ॥ ಪ್ರಜಾಪತಿರಕಾಮಯತ ಪ್ರಜಾಸ್ಸೃಜೇಯೇತಿ। ಸ ಏತಂದಶಹೋತಾರಮಪಶ್ಯತ್। ತಂ ಮನಸಾಽನುದ್ಯ್ಯ ದರ್ಭಸ್ತಂಬೇಽಜುಹೋತ್। ತತೋ ವೈ ಸ ಪ್ರಜಾ ಅಸೃಜತ। ತಾ

ಅಸ್ಮಾಥ್ಸ್ಯಷ್ಟಾ ಅಪಾಕ್ರಾಮನ್। ತಾ ಗ್ರಹೇಣಾ ಗೃಹ್ಣಾತ್। ತದ್ಗ್ರಹಸ್ಯ ಗ್ರಹತ್ವಮ್। ಯಃಕಾಮಯೇತ ಪ್ರಜಾಯೇಯೇತಿ। ಸ ದಶ-ಹೋತಾರಂ ಮನಸಾಽನುದ್ರುತ್ಯ ದರ್ಭಸ್ತಂಬೇ ಜುಹುಯಾತ್। ಪ್ರಜಾಪತಿರ್ವೈ ದಶಹೋತಾ ॥ ೧ ॥ ಪ್ರಜಾಪತಿರೇವ ಭೂತ್ವಾ ಪ್ರ ಜಾಯತೇ। ಮನಸಾ ಜುಹೋತಿ। ಮನ ಇವ ಹಿ ಪ್ರಜಾಪತಿಃ। ಪ್ರಜಾಪತೇರಾಪ್ತ್ಯೈ। ಪೂರ್ಣಯಾ ಜುಹೋತಿ। ಪೂರ್ಣ ಇವ ಹಿ ಪ್ರಜಾಪತಿಃ। ಪ್ರಜಾಪತೇರಾಪ್ತ್ಯೈ। ನ್ಯೂನಯಾ ಜುಹೋತಿ। ನ್ಯೂನಾದ್ಧಿ ಪ್ರಜಾಪತಿಃ ಪ್ರಜಾ ಅಸೃಜತ। ಪ್ರಜಾನಾಗ್ಂ ಸೃಷ್ಟ್ಯೈ ॥ ೨ ॥ ದರ್ಭಸ್ತಂಬೇ ಜುಹೋತಿ। ಏತಸ್ಮಾದ್ವೈ ಯೋನೇಃ ಪ್ರಜಾಪತಿಃ ಪ್ರಜಾ ಅಸೃಜತ। ಯಸ್ಮಾದೇವ ಯೋನೇಃ ಪ್ರಜಾಪತಿಃ ಪ್ರಜಾ ಅಸೃಜತ। ತಸ್ಮಾದೇವ ಯೋನೇಃ ಪ್ರಜಾಯತೇ। ಬ್ರಾಹ್ಮಣೋ ದಕ್ಷಿಣತ ಉಪಾಸ್ತೇ। ಬ್ರಾಹ್ಮಣೋ ವೈ ಪ್ರಜಾನಾಮುಪದ್ರಷ್ಟಾ। ಉಪದ್ರಷ್ಟುಮತ್ಯೇವ ಪ್ರ ಜಾಯತೇ। ಗ್ರಹೋ ಭವತಿ। ಪ್ರಜಾ-ನಾಗ್ಂ ಸೃಷ್ಟಾನಾಂಧೃತ್ಯೈ। ಯಂ ಬ್ರಾಹ್ಮಣಂ ವಿದ್ಯಾಂ ವಿದ್ವಾಗ್ಂಸಂ ಯಶೋ ನರ್ಚೀತ್ ॥ ೩ ॥ ಸೋಽರಣ್ಯಂ ಪರೇತ್ಯ। ದರ್ಭ-ಸ್ತಂಬಮುದ್ಗ್ರಥ್ಯ। ಬ್ರಾಹ್ಮಣಂ ದಕ್ಷಿಣತೋ ನಿಷಾದ್ಯ। ಚತುರ್-

ಹೋತೃನ್ವ್ಯಾಚಷ್ಟೇತ। ಏತದ್ವೈ ದೇವಾನಾಂ ಪರಮಂ ಗುಹ್ಯಂ ಬ್ರಹ್ಮ। ಯಚ್ಚತುರ್ಹೋತಾರಃ। ತದೇವ ಪ್ರಕಾಶಙ್ಗಮಯತಿ। ತದೇನಂ ಪ್ರಕಾಶಙ್ಗತಮ್। ಪ್ರಕಾಶಂ ಪ್ರಜಾನಾಙ್ಗಮಯತಿ। ದರ್ಭಸ್ತಂಬಮುದ್ಗ್ರಥ್ಯವ್ಯಾಚಷ್ಟೇ ॥ ೪ ॥ ಅಗ್ನಿವಾನ್ ವೈ ದರ್ಭಸ್ತಂಬಃ। ಅಗ್ನಿವತ್ಯೇವ ವ್ಯಾಚಷ್ಟೇ। ಬ್ರಾಹ್ಮಣೋ ದಕ್ಷಿಣತ ಉಪಾಸ್ತೇ। ಬ್ರಾಹ್ಮಣೋ ವೈ ಪ್ರಜಾನಾಮುಪದ್ರಷ್ಟಾ। ಉಪದ್ರಷ್ಟುಮತ್ಯೇವೈನಂ ಯಶ ಋಚ್ಛತಿ। ಈಶ್ವರಂ ತಂ ಯಶೋಽರ್ತೋರಿತ್ಯಾಹುಃ। ಯಸ್ಯಾಂತೇ ವ್ಯಾಚಷ್ಟ ಇತಿ। ವರಸ್ತಸ್ಮೈ ದೇಯಃ। ಯದೇವೈನಂತತ್ರೋಪ ನಮತಿ। ತದೇವಾವರುಂಧೇ ॥ ೫ ॥ ಅಗ್ನಿಮಾದಧಾನೋ ದಶಹೋತ್ರಾಽರಣಿಮವ ದಧ್ಯಾತ್। ಪ್ರಜಾತಮೇವೈನ ಮಾ ಧತ್ತೇ। ತೇನೈವೋದ್ಯುತ್ಯಾಗ್ನಿಹೋತ್ರಂ ಜುಹುಯಾತ್। ಪ್ರಜಾತಮೇವೈನಜ್ಜುಹೋತಿ। ಹವಿರ್ನಿರ್ವಪ್ಸ್ಯಂದಶಹೋತಾರಂ ವ್ಯಾಚಷ್ಟೇತ। ಪ್ರಜಾತಮೇವೈನನ್ನಿರ್ವಪತಿ। ಸಾಮಿಧೇನೀರನುವಕ್ಷ್ಯಂದಶಹೋತಾರಂ ವ್ಯಾಚಷ್ಟೇತ। ಸಾಮಿಧೇನೀರೇವ ಸೃಷ್ಟ್ವಾ ಽSರಭ್ಯ ಪ್ರ ತನುತೇ। ಅಥೋ ಯಜ್ಞೋ ವೈ ದಶಹೋತಾ। ಯಜ್ಞಮೇವ ತನುತೇ ॥ ೬ ॥ ಅಭಿಚರಂದಶಹೋತಾರಂ ಜುಹುಯಾತ್। ನವ ವೈ ಪುರುಷೇ ಪ್ರಾಣಾಃ।

ನಾಭಿರ್ದಶಮೀ। ಸಪ್ರಾಣಮೇವೈನಮಭಿ ಚರತಿ। ಏತಾವದ್ವೈ ಪುರುಷಸ್ಯ ಸ್ವಮ್। ಯಾವತ್ಪ್ರಾಣಾಃ। ಯಾವದೇವಾಸ್ಯಾಸ್ತಿ। ತದಭಿ ಚರತಿ। ಸ್ವಕೃತ ಇರಿಣೇ ಜುಹೋತಿ ಪ್ರದರೇವಾ। ಏತದ್ವಾ ಅಸ್ಯೈ ನಿರ್ಋತಿಗೃಹೀತಮ್। ನಿರ್ಋತಿಗೃಹೀತ ಏವೈನನ್ನಿರ್ಋತ್ಯಾ ಗ್ರಾಹಯತಿ। ಯದ್ವಾಚಃ ಕ್ರೂರಮ್। ತೇನ ವಷಟ್ಕರೋತಿ। ವಾಚ ಏವೈನಂ ಕ್ರೂರೇಣ ಪ್ರವೃಶ್ಚತಿ। ತಾಜಗಾರ್ತಿ ಮಾರ್ಚ್ಛತಿ ॥ ೭ ॥

ದಶಹೋತಾ ಸೃಷ್ಟ್ವಾ ಋಚ್ಛೇದ್ವ್ಯಚಷ್ಟೇ ರುಂಧ ಏವ ತನುತೇ ನಿರ್ಋತಿಗೃಹೀತಂ ಪಞ್ಚ ಚ ॥ 1 ॥

ಪ್ರಜಾಪತಿರಕಾಮಯತ ದರ್ಶಪೂರ್ಣಮಾಸೌ ಸೃಜೇಯೇತಿ। ಸ ಏತಞ್ಚತುರ್ಹೋತಾರಮಪಶ್ಯತ್। ತಂ ಮನಸಾऽನುದ್ರುತ್ಯ ಹವನೀಯೇऽಜುಹೋತ್। ತತೋ ವೈ ಸ ದರ್ಶಪೂರ್ಣಮಾಸಾವಸೃಜತ। ತಾವಸ್ಮಾತ್ಸೃಷ್ಟಾವಪಾಕ್ರಾಮತಾಮ್। ತೌ ಗ್ರಹೇಣಾ ಗೃಹ್ಣಾತ್। ತದ್ಗ್ರಹಸ್ಯ ಗ್ರಹತ್ವಮ್। ದರ್ಶಪೂರ್ಣಮಾಸಾವಾಲಭಮಾನಃ। ಚತುರ್ಹೋತಾರಂ ಮನಸಾऽನುದ್ರುತ್ಯಾಹವನೀಯೇ ಜುಹುಯಾತ್। ದರ್ಶಪೂರ್ಣಮಾಸಾವೇವ ಸೃಷ್ಟ್ವಾ ऽऽರಭ್ಯ ಪ್ರತನುತೇ ॥ ೮ ॥ ಗ್ರಹೋ ಭವತಿ। ದರ್ಶಪೂರ್ಣಮಾಸಯೋ-

ಸ್ಸೃಷ್ಟಯೋರ್ಧೃತ್ಯೈ। ಸೋಽಕಾಮಯತ। ಚಾತುರ್ಮಾಸ್ಯಾನಿ ಸೃಜೇಯೇತಿ। ಸ ಏತಂ ಪಞ್ಚಹೋತಾರಮಪಶ್ಯತ್। ತಂ ಮನಸಾಽನುದ್ರುತ್ಯಾಹವನೀಯೇಽಜುಹೋತ್। ತತೋ ವೈ ಸ ಚಾತುರ್ಮಾಸ್ಯಾನ್ಯಸೃಜತ। ತಾನ್ಯಸ್ಮಾತ್ಸೃಷ್ಟಾನ್ಯಪಾಕ್ರಾಮನ್। ತಾನಿ ಗ್ರಹೇಣಾಗೃಹ್ಣಾತ್। ತದ್ಗ್ರಹಸ್ಯ ಗ್ರಹತ್ವಮ್। ಚಾತುರ್ಮಾಸ್ಯಾನ್ಯಾಲಭಮಾನಃ॥ ೯॥ ಪಞ್ಚಹೋತಾರಂ ಮನಸಾಽನುದ್ರುತ್ಯಾಹವನೀಯೇ ಜುಹುಯಾತ್। ಚಾತುರ್ಮಾಸ್ಯಾನ್ಯೇವ ಸೃಷ್ಟ್ವಾಽಽರಭ್ಯ ಪ್ರ ತನುತೇ। ಗ್ರಹೋ ಭವತಿ। ಚಾತುರ್ಮಾಸ್ಯಾನಾಗ್ಂ ಸೃಷ್ಟಾನಾಂ-ಧೃತ್ಯೈ। ಸೋಽಕಾಮಯತ ಪಶುಬಂಧಗ್ಂ ಸೃಜೇಯೇತಿ। ಸ ಏತಗ್ಂ ಷಡ್ಹೋತಾರಮಪಶ್ಯತ್। ತಂ ಮನಸಾಽನುದ್ರುತ್ಯಾ-ಹವನೀಯೇಽಜುಹೋತ್। ತತೋ ವೈ ಸ ಪಶುಬಂಧಮ ಸೃಜತ। ಸೋಽಸ್ಮಾತ್ಸೃಷ್ಟೋಽಪಾಕ್ರಾಮತ್। ತಂ ಗ್ರಹೇಣಾಗೃಹ್ಣಾತ್॥ ೧೦॥ ತದ್ಗ್ರಹಸ್ಯ ಗ್ರಹತ್ವಮ್। ಪಶುಬಂಧೇನ ಯಕ್ಷ್ಯಮಾಣಃ। ಷಡ್ಹೋ-ತಾರಂ ಮನಸಾಽನುದ್ರುತ್ಯಾಹವನೀಯೇ ಜುಹುಯಾತ್। ಪಶು-ಬಂಧಮೇವ ಸೃಷ್ಟ್ವಾಽಽರಭ್ಯ ಪ್ರ ತನುತೇ। ಗ್ರಹೋ ಭವತಿ। ಪಶುಬಂಧಸ್ಯ ಸೃಷ್ಟಸ್ಯ ಧೃತ್ಯೈ। ಸೋಽಕಾಮಯತ ಸೌಮ್ಯ-

ಮಧ್ವರಗ್ಂ ಸೃಜೇಯೇತಿ। ಸ ಏತಗ್ಂ ಸಪ್ತ ಹೋತಾರಮಪಶ್ಯತ್। ತಂ ಮನಸಾಽನುದ್ರುತ್ಯಾಹವನೀಯೇಽಜುಹೋತ್। ತತೋ ವೈ ಸ ಸೌಮ್ಯಮಧ್ವರಮಸೃಜತ ॥ ೧೧ ॥ ಸೋಽಸಾತ್ಪ್ರಸೃಷ್ಟೋಽಪಾಕ್ರಾಮತ್। ತಂ ಗ್ರಹೇಣಾಗೃಹ್ಣಾತ್। ತದ್ಗ್ರಹಸ್ಯ ಗ್ರಹತ್ವಮ್। ದೀಕ್ಷಿಷ್ಯಮಾಣಃ। ಸಪ್ತಹೋತಾರಂ ಮನಸಾಽನುದ್ರುತ್ಯಾಹವನೀಯೇ ಜುಹುಯಾತ್। ಸೌಮ್ಯಮೇವಾಧ್ವರಗ್ಂ ಸೃಷ್ಟ್ವಾ ಽಽರಭ್ಯ ಪ್ರ ತನುತೇ। ಗ್ರಹೋ ಭವತಿ। ಸೌಮ್ಯಸ್ಯಾಧ್ವರಸ್ಯ ಸೃಷ್ಟಸ್ಯ ಧೃತ್ಯೈ। ದೇವೇಭ್ಯೋ ವೈ ಯಜ್ಞೋ ನ ಪ್ರಾಭವತ್। ತಮೇ ತಾವಚ್ಛಸ್ಸಮಭರನ್ ॥ ೧೨ ॥ ಯಥ್ಸಂಭಾರಾಃ। ತತೋ ವೈ ತೇಭ್ಯೋ ಯಜ್ಞಃ ಪ್ರಾಭವತ್। ಯಥ್ಸಂಭಾರಾ ಭವಂತಿ। ಯಜ್ಞಸ್ಯ ಪ್ರಭೂತ್ಯೈ। ಆತಿಥ್ಯಮಾಸಾದ್ಯ ವ್ಯಾಚಷ್ಟೇ। ಯಜ್ಞಮುಖಂ ವಾ ಆತಿಥ್ಯಮ್। ಮುಖಿತ ಏವ ಯಜ್ಞಗ್ಂ ಸಂಭೃತ್ಯ ಪ್ರ ತನುತೇ। ಅಯಜ್ಞೋ ವಾ ಏಷಃ। ಯೋಽಪತ್ನೀಕಃ। ನ ಪ್ರಜಾಃ ಪ್ರಜಾಯೇರನ್। ಪತ್ನೀರ್ವ್ಯಾಚಷ್ಟೇ। ಯಜ್ಞಮೇವಾಕಃ। ಪ್ರಜಾನಾಂ ಪ್ರಜನನಾಯ। ಉಪಸತ್ಸು ವ್ಯಾಚಷ್ಟೇ। ಏತದ್ವೈ ಪತ್ನೀನಾಮಾಯತನಮ್। ಸ್ವ ಏವೈನಾ ಆಯತನೇಽವ ಕಲ್ಪಯತಿ ॥ ೧೩ ॥

ತನುತ ಆಲಭಮಾನೋಽಗೃಹ್ಣಾದಸೃಜತಾಭರಞ್ಜಾಯೇರನ್-
ಥ್ಷಟ್ಚ ॥ 2 ॥

ಪ್ರಜಾಪತಿರಕಾಮಯತ ಪ್ರಜಾಯೇಯೇತಿ। ಸ ತಪೋಽ-
ತಪ್ಯತ। ಸ ತ್ರಿವೃತಗ್ಂಸ್ತೋಮಮಸೃಜತ। ತಂ ಪಂಚದಶ-
ಸ್ತೋಮೋ ಮಧ್ಯತ ಉದತೃಣತ್। ತೌ ಪೂರ್ವಪಕ್ಷಶ್ಚಾಪರ-
ಪಕ್ಷಶ್ಚಾ ಭವತಾಮ್। ಪೂರ್ವಪಕ್ಷಂ ದೇವಾ ಅನ್ವಸೃಜ್ಯಂತ। ಅಪರ-
ಪಕ್ಷಮನ್ವಸುರಾಃ। ತತೋ ದೇವಾ ಅಭವನ್। ಪರಾಽಸುರಾಃ। ಯಂ
ಕಾಮಯೇತ ವಸೀಯಾನ್ಥ್ಸ್ಯಾದಿತಿ ॥ ೧೪ ॥ ತಂ ಪೂರ್ವಪಕ್ಷೇ
ಯಾಜಯೇತ್। ವಸೀಯಾನೇವ ಭವತಿ। ಯಜ್ಯಾಮಯೇತ
ಪಾಪೀಯಾನ್ಥ್ಸ್ಯಾದಿತಿ। ತಮಪರಪಕ್ಷೇ ಯಾಜಯೇತ್।
ಪಾಪೀಯಾನೇವ ಭವತಿ। ತಸ್ಮಾತ್ಪೂರ್ವಪಕ್ಷೋಽಪರಪಕ್ಷಾ-
ತ್ಕರುಣ್ಯತರಃ। ಪ್ರಜಾಪತಿರ್ವೈ ದಶಹೋತಾ। ಚತುರ್ಹೋತಾ
ಪಞ್ಚಹೋತಾ। ಷಡ್ಢೋತಾ ಸಪ್ತಹೋತಾ। ಋತವಸ್ಸಂವಥ್ಸರಃ
॥೧೫॥ ಪ್ರಜಾಃ ಪಶವ ಇಮೇ ಲೋಕಾಃ। ಯ ಏವಂ ಪ್ರಜಾಪತಿಂ
ಬಹೋರ್ಭೂಯಾಗ್ಂಸಂ ವೇದ। ಬಹೋರೇವ ಭೂಯಾನ್ಭವತಿ।

ಪ್ರಜಾಪತಿರ್ದೇವಾಸುರಾನಸೃಜತ। ಸ ಇಂದ್ರಮಪಿ ನಾಸೃಜತ। ತಂದೇವಾ ಅಬ್ರುವನ್ನಿ। ಇಂದ್ರನ್ನೋ ಜನಯೇತಿ। ಸೋಽಬ್ರವೀತ್। ಯಥಾಽಹಂ ಯುಷ್ಮಾಗ್ಂಸ್ತಪಸಾಸೃಕ್ಷಿ। ಏವಮಿಂದ್ರಂ ಜನಯದ್ವಮಿತಿ ॥ ೧೬ ॥ ತೇ ತಪೋಽತಪ್ಯಂತ। ತ ಆತ್ಮನ್ನಿಂದ್ರಮಪಶ್ಯನ್। ತಮಬ್ರುವನ್। ಜಾಯಸ್ವೇತಿ। ಸೋಽಬ್ರವೀತ್। ಕಿಂ ಭಾಗಧೇಯಮಭಿ ಜನಿಷ್ಯ ಇತಿ। ಋತೂನ್ಥ್ಸಂವಥ್ಸರಮ್। ಪ್ರಜಾಃ ಪಶೂನ್। ಇಮಾನ್ಲೋಕಾನಿತ್ಯಬ್ರುವನ್। ತಂ ವೈ ಮಾಽಽಹುತ್ಯಾ ಪ್ರ ಜನಯತೇತ್ಯಬ್ರವೀತ್ ॥ ೧೭ ॥ ತಞ್ಚತುರ್ಹೋತ್ರಾ ಪ್ರಾಜನಯನ್। ಯಃಕಾಮಯೇತ ವೀರೋ ಮ ಆ ಜಾಯೇತೇತಿ। ಸ ಚತುರ್ಹೋತಾರಞ್ಜುಹುಯಾತ್। ಪ್ರಜಾಪತಿರ್ವೈ ಚತುರ್ಹೋತಾ। ಪ್ರಜಾಪತಿರೇವ ಭೂತ್ವಾ ಪ್ರಜಾಯತೇ। ಜಜನದಿಂದ್ರಮಿಂದ್ರಿಯಾಯ ಸ್ವಾಹೇತಿ ಗ್ರಹೇಣ ಜುಹೋತಿ। ಆಽಸ್ಯ ವೀರೋ ಜಾಯತೇ। ವೀರಗ್ಂ ಹಿ ದೇವಾ ಏತಯಾಽಽಹುತ್ಯಾ ಪ್ರಾಜನಯನ್। ಆದಿತ್ಯಾಶ್ಚಾಙ್ಗಿರಸಶ್ಚ ಸುವರ್ಗೇ ಲೋಕೇಽಸ್ಪರ್ಧಂತ। ವಯಂ ಪೂರ್ವೇ ಸುವರ್ಗಂ ಲೋಕಮಿಯಾಮ ವಯಂ ಪೂರ್ವ ಇತಿ ॥ ೧೮ ॥ ತ ಆದಿತ್ಯಾ ಏತಂ ಪಞ್ಚಹೋತಾರಮಪಶ್ಯನ್। ತಂ ಪುರಾ ಪ್ರಾತ-

ರನುವಾಕಾದಾಗ್ನೀಧ್ರೇऽಜುಹವುಃ। ತತೋ ವೈ ತೇ ಪೂರ್ವೇ
ಸುವರ್ಗಲ್ಲೋಕಮಾಯನ್। ಯಸ್ಸುವರ್ಗಕಾಮಸ್ಸ್ಯಾತ್। ಸ ಪಞ್ಚ-
ಹೋತಾರಂ ಪುರಾ ಪ್ರಾತರನುವಾಕಾದಾಗ್ನೀಧ್ರೇ ಜುಹುಯಾತ್।
ಸಂವಥ್ಸರೋ ವೈ ಪಞ್ಚಹೋತಾ। ಸಂವಥ್ಸರಸ್ಸುವರ್ಗೋ ಲೋಕಃ।
ಸಂವಥ್ಸರ ಏವರ್ತುಷು ಪ್ರತಿಷ್ಠಾಯ। ಸುವರ್ಗಲ್ಲೋಕಮೇತಿ।
ತೇऽಬ್ರುವನ್ನಙ್ಗಿರಸ ಆದಿತ್ಯಾನ್ ॥ ೧೯ ॥ ಕ್ವ ಸ್ಥ। ಕ್ವ ವಸ್ಸದ್ಭ್ಯೋ
ಹವ್ಯಂ ವಖ್ಷ್ಯಾಮ ಇತಿ। ಛಂದಸ್ಸ್ವಿತ್ಯಬ್ರುವನ್। ಗಾಯತ್ರ್ಯಾ-
ಯಾಂತ್ರಿಷ್ಟುಭಿ ಜಗತ್ಯಾಮಿತಿ। ತಸ್ಮಾಚ್ಛಂದಸ್ಸು ಸದ್ಭ್ಯ ಆದಿತ್ಯೇಭ್ಯಃ।
ಆಙ್ಗಿರಸೀಃ ಪ್ರಜಾ ಹವ್ಯಂ ವಹಂತಿ। ವಹಂತ್ಯಸ್ಮೈ ಪ್ರಜಾ ಬಲಿಮ್।
ಏನಮಪ್ರತಿಖ್ಯಾತಞ್ಚಿಚ್ಛತಿ। ಯ ಏವಂ ವೇದ। ದ್ವಾದಶ ಮಾಸಾಃ
ಪಞ್ಚರ್ತವಃ। ತ್ರಯ ಇಮೇ ಲೋಕಾಃ। ಅಸಾವಾದಿತ್ಯ ಏಕವಿಗ್ಂಶಃ।
ಏತಸ್ಮಿನ್ವಾ ಏಷ ಶ್ರಿತಃ। ಏತಸ್ಮಿನ್ಪ್ರತಿಷ್ಠಿತಃ। ಯ ಏವಮೇತಗ್ಂ ಶ್ರಿತಂ
ಪ್ರತಿಷ್ಠಿತಂ ವೇದ। ಪ್ರತ್ಯೇವ ತಿಷ್ಠತಿ ॥ ೨೦ ॥

ಸ್ಯಾದಿತಿ ಸಂವಥ್ಸರೋ ಜನಯಧ್ವಮಿತೀತ್ಯ ಬ್ರವೀತ್ಪೂರ್ವ
ಇತ್ಯಾದಿತ್ಯಾನೃತವಷ್ಷಟ್ಚ ॥ 3 ॥

ಪ್ರಜಾಪತಿರಕಾಮಯತ ಪ್ರಜಾಯೇಯೇತಿ। ಸ ಏತಂ ದಶ-

ಹೋತಾರಮಪಶ್ಯತ್। ತೇನ ದಶಧಾऽऽತ್ಮಾನಂ ವಿಧಾಯ। ದಶಹೋತ್ರಾऽತಪ್ಯತ। ತಸ್ಯ ಚಿತ್ತಿಸ್ರುಗಾಸೀತ್। ಚಿತ್ತಮಾಜ್ಯಮ್। ತಸ್ಯೈತಾವತ್ಯೇವ ವಾಗಾಸೀತ್। ಏತಾವಾನ್ ಯಜ್ಞಕ್ರತುಃ। ಸ ಚತುರ್ಹೋತಾರಮಸೃಜತ। ಸೋऽನಂದತ್ ॥ ೨೧ ॥ ಅಸೃಖ್ಷಿ ವಾ ಇಮಮಿತಿ। ತಸ್ಯ ಸೋಮೋ ಹವಿರಾಸೀತ್। ಸ ಚತುರ್ಹೋತ್ರಾऽತಪ್ಯತ। ಸೋऽತಾಮ್ಯತ್। ಸ ಭೂರಿತಿ ವ್ಯಾಹರತ್। ಸ ಭೂಮಿಮಸೃಜತ। ಅಗ್ನಿಹೋತ್ರಂ ದರ್ಶಪೂರ್ಣಮಾಸೌ ಯಜೂಗ್ಂಷಿ। ಸ ದ್ವಿತೀಯಮತಪ್ಯತ। ಸೋऽತಾಮ್ಯತ್। ಸ ಭುವ ಇತಿ ವ್ಯಾಹರತ್ ॥ ೨೨ ॥ ಸೋಂऽತರಿಖ್ಷಮಸೃಜತ। ಚಾತುರ್ಮಾಸ್ಯಾನಿ ಸಾಮಾನಿ। ಸ ತೃತೀಯಮತಪ್ಯತ। ಸೋऽತಾಮ್ಯತ್। ಸ ಸುವರಿತಿ ವ್ಯಾಹರತ್। ಸ ದಿವಮಸೃಜತ। ಅಗ್ನಿಷ್ಟೋಮಮುಕ್ಥ್ಯಮತಿರಾತ್ರಮೃಚಃ। ಏತಾ ವೈ ವ್ಯಾಹೃತಯ ಇಮೇ ಲೋಕಾಃ। ಇಮಾನ್ವಲು ವೈ ಲೋಕಾನನು ಪ್ರಜಾಃ ಪಶವಶ್ಛಂದಾಗ್ಂಸಿ ಪ್ರಾಜಾಯಂತ। ಯ ಏವಮೇತಾಃ ಪ್ರಜಾಪತೇಃ ಪ್ರಥಮಾ ವ್ಯಾಹೃತೀಃ ಪ್ರಜಾತಾ ವೇದ ॥ ೨೩ ॥ ಪ್ರ ಪ್ರಜಯಾ ಪಶುಭಿರ್ಮಿಥುನೈರ್ಜಾಯತೇ। ಸ ಪಞ್ಚಹೋತಾರಮಸೃಜತ। ಸ ಹವಿರ್ನಾವಿಂದತ। ತಸ್ಮೈ ಸೋಮ ಸ್ತನುವಂ ಪ್ರಾಯಚ್ಛತ್। ಏತತ್ತೇ

ಹವಿರಿತಿ। ಸ ಪಞ್ಚಹೋತ್ರಾಽತಪ್ಯತ। ಸೋಽತಾಮ್ಯತ್। ಸ ಪ್ರತ್ಯಙ್ಙ
ಬಾಧತ। ಸೋಽಸುರಾನಸೃಜತ। ತದಸ್ಯಾಪ್ರಿಯಮಾಸೀತ್ ॥ ೨೪ ॥
ತದ್ದುರ್ವರ್ಣಗ್ಂ ಹಿರಣ್ಯಮಭವತ್। ತದ್ದುರ್ವರ್ಣಸ್ಯ ಹಿರಣ್ಯಸ್ಯ
ಜನ್ಮ। ಸ ದ್ವಿತೀಯಮತಪ್ಯತ। ಸೋಽತಾಮ್ಯತ್। ಸ ಪ್ರಾಙಬಾಧತ।
ಸ ದೇವಾನಸೃಜತ। ತದಸ್ಯ ಪ್ರಿಯಮಾಸೀತ್। ತಥ್ಸುವರ್ಣಗ್ಂ
ಹಿರಣ್ಯಮಭವತ್। ತಥ್ಸುವರ್ಣಸ್ಯ ಹಿರಣ್ಯಸ್ಯ ಜನ್ಮ। ಯ ಏವಗ್ಂ
ಸುವರ್ಣಸ್ಯ ಹಿರಣ್ಯಸ್ಯ ಜನ್ಮ ವೇದ ॥ ೨೫ ॥ ಸುವರ್ಣ ಆತ್ಮನಾ
ಭವತಿ। ದುರ್ವರ್ಣೋಽಸ್ಯ ಭ್ರಾತೃವ್ಯಃ। ತಸ್ಮಾಥ್ಸುವರ್ಣಗ್ಂ
ಹಿರಣ್ಯಂ ಭಾರ್ಯಮ್। ಸುವರ್ಣ ಏವ ಭವತಿ। ಏನಂ ಪ್ರಿಯಙ್ಗಚ್ಛತಿ
ನಾಪ್ರಿಯಮ್। ಸ ಸಪ್ತಹೋತಾರಮಸೃಜತ। ಸ ಸಪ್ತಹೋತ್ರೈವ
ಸುವರ್ಗಲ್ಲೋಕಮೈತ್। ತ್ರಿಣವೇನ ಸ್ತೋಮೇನೈಭ್ಯೋ
ಲೋಕೇಭ್ಯೋಽಸುರಾನ್ಪ್ರಣುದತ। ತ್ರಯಸ್ತ್ರಿಗ್ಂಶೇನ ಪ್ರತ್ಯತಿಷ್ಠತ್।
ಏಕವಿಗ್ಂಶೇನ ರುಚಮಧತ್ತ ॥ ೨೬ ॥ ಸಪ್ತದಶೇನ ಪ್ರಾಜಾಯತ।
ಯ ಏವಂ ವಿದ್ವಾನ್ಥ್ಸೋಮೇನ ಯಜತೇ। ಸಪ್ತಹೋತ್ರೈವ
ಸುವರ್ಗಲ್ಲೋಕಮೇತಿ। ತ್ರಿಣವೇನ ಸ್ತೋಮೇನೈಭ್ಯೋ ಲೋಕೇಭ್ಯೋ
ಭ್ರಾತೃವ್ಯಾನ್ಪ್ರಣುದತೇ। ತ್ರಯಸ್ತ್ರಿಗ್ಂಶೇನ ಪ್ರತಿತಿಷ್ಠತಿ। ಏಕವಿಗ್ಂಶೇನ

ರುಚಂಧತ್ತೇ। ಸಪ್ತದಶೇನ ಪ್ರಜಾಯತೇ। ತಸ್ಮಾತ್ಸಪ್ತದಶಸ್ಸ್ತೋಮೋ ನ ನಿರ್ಹೃತ್ಯಃ। ಪ್ರಜಾಪತಿರ್ವೈ ಸಪ್ತದಶಃ। ಪ್ರಜಾಪತಿಮೇವ ಮಧ್ಯತೋ ಧತ್ತೇ ಪ್ರಜಾತ್ಯೈ ॥ ೨೭ ॥

ಅನಂದದ್ಭವ ಇತಿ ವ್ಯಾಹರದ್ವೇದಾಸೀದ್ವೇದಾಧತ್ತ ಪ್ರಜಾತ್ಯೈ ॥ 4 ॥

ದೇವಾ ವೈ ವರುಣಮಯಾಜಯನ್। ಸ ಯಸ್ಯೈ ಯಸ್ಯೈ ದೇವತಾಯೈ ದಕ್ಷಿಣಾಮನಯತ್। ತಾಮವ್ಲೀನಾತ್। ತೇಽಬ್ರುವನ್। ವ್ಯಾವೃತ್ಯ ಪ್ರತಿಗೃಹ್ಣಾಮ। ತಥಾ ನೋ ದಕ್ಷಿಣಾ ನ ವ್ಲೇಷ್ಯತೀತಿ। ತೇ ವ್ಯಾವೃತ್ಯ ಪ್ರತ್ಯಗೃಹ್ಣನ್। ತತೋ ವೈ ತಾಂ ದಕ್ಷಿಣಾ ನಾವ್ಲೀನಾತ್। ಯ ಏವಂ ವಿದ್ವಾನ್ವ್ಯಾವೃತ್ಯ ದಕ್ಷಿಣಾಂ ಪ್ರತಿಗೃಹ್ಣಾತಿ। ನೈನಂ ದಕ್ಷಿಣಾವ್ಲೀನಾತಿ ॥ ೨೮ ॥ ರಾಜಾ ತ್ವಾ ವರುಣೋ ನಯತು ದೇವಿ ದಕ್ಷಿಣೇಽಗ್ನಯೇ ಹಿರಣ್ಯಮಿತ್ಯಾಹ। ಆಗ್ನೇಯಂ ವೈ ಹಿರಣ್ಯಮ್। ಸ್ವಯೈವೈನದ್ದೇವತಯಾ ಪ್ರತಿಗೃಹ್ಣಾತಿ। ಸೋಮಾಯ ವಾಸ ಇತ್ಯಾಹ। ಸೌಮ್ಯಂ ವೈ ವಾಸಃ। ಸ್ವಯೈವೈನದ್ದೇವತಯಾ ಪ್ರತಿಗೃಹ್ಣಾತಿ। ರುದ್ರಾಯ ಗಾಮಿತ್ಯಾಹ। ರೌದ್ರೀ ವೈ ಗೌಃ। ಸ್ವಯೈವೈನಾಂದೇವತಯಾ ಪ್ರತಿಗೃಹ್ಣಾತಿ। ವರುಣಾಯಾಶ್ವಮಿತ್ಯಾಹ ॥ ೨೯ ॥

ವಾರುಣೋ ವಾ ಅಶ್ವಃ। ಸ್ವಯೈವೈನಂ ದೇವತಯಾ ಪ್ರತಿಗೃಹ್ಣಾತಿ।
ಪ್ರಜಾಪತಯೇ ಪುರುಷಮಿತ್ಯಾಹ। ಪ್ರಾಜಾಪತ್ಯೋ ವೈ ಪುರುಷಃ।
ಸ್ವಯೈವೈನಂ ದೇವತಯಾ ಪ್ರತಿಗೃಹ್ಣಾತಿ। ಮನವೇ ತಲ್ಪಮಿತ್ಯಾಹ।
ಮಾನವೋ ವೈ ತಲ್ಪಃ। ಸ್ವಯೈವೈನಂ ದೇವತಯಾ ಪ್ರತಿಗೃಹ್ಣಾತಿ।
ಉತ್ತಾನಾಯಾಙ್ಗಿರಸಾಯಾನ ಇತ್ಯಾಹ। ಇಯಂ ವಾ ಉತ್ತಾನ
ಆಙ್ಗಿರಸಃ ॥ ೩೦ ॥ ಅನಯೈವೈನತ್ಪ್ರತಿಗೃಹ್ಣಾತಿ। ವೈಶ್ವಾನರ್ಯರ್ಚಾ
ರಥಂ ಪ್ರತಿಗೃಹ್ಣಾತಿ। ವೈಶ್ವಾನರೋ ವೈ ದೇವತಯಾ ರಥಃ।
ಸ್ವಯೈವೈನಂ ದೇವತಯಾ ಪ್ರತಿ ಗೃಹ್ಣಾತಿ। ತೇನಾಮೃತತ್ವಮಶ್ಯಾ-
ಮಿತ್ಯಾಹ। ಅಮೃತಮೇವಾತ್ಮಂಧತ್ತೇ। ವಯೋ ದಾತ್ರ ಇತ್ಯಾಹ।
ವಯ ಏವೈನಂ ಕೃತ್ವಾ। ಸುವರ್ಗಲೋಕಙ್ಗಮಯತಿ। ಮಯೋ-
ಮಹ್ಯಮಸ್ತು ಪ್ರತಿಗ್ರಹೀತ್ರ ಇತ್ಯಾಹ ॥ ೩೧ ॥ ಯದ್ವೈಶಿವಮ್।
ತನ್ಮಯಃ। ಆತ್ಮನ ಏವೈಷಾ ಪರೀತ್ತಿಃ। ಕ ಇದಙ್ಕಸ್ಮಾ ಅದಾದಿತ್ಯಾಹ।
ಪ್ರಜಾಪತಿರ್ವೈ ಕಃ। ಸ ಪ್ರಜಾಪತಯೇ ದದಾತಿ। ಕಾಮಃ
ಕಾಮಾಯೇತ್ಯಾಹ। ಕಾಮೇನ ಹಿ ದದಾತಿ। ಕಾಮೇನ ಪ್ರತಿಗೃಹ್ಣಾತಿ।
ಕಾಮೋದಾತಾ ಕಾಮಃ ಪ್ರತಿಗ್ರಹೀತೇತ್ಯಾಹ ॥ ೩೨ ॥ ಕಾಮೋ ಹಿ
ದಾತಾ। ಕಾಮಃ ಪ್ರತಿಗ್ರಹೀತಾ। ಕಾಮಗ್ಂ ಸಮುದ್ರಮಾವಿಶೇತ್ಯಾಹ।

ಸಮುದ್ರ ಇವ ಹಿ ಕಾಮಃ। ನೇವ ಹಿ ಕಾಮಸ್ಯಾನ್ತೋಽಸ್ತಿ। ನ ಸಮುದ್ರಸ್ಯ। ಕಾಮೇನ ತ್ವಾ ಪ್ರತಿಗೃಹ್ಣಾಮೀತ್ಯಾಹ। ಯೇನ ಕಾಮೇನ ಪ್ರತಿಗೃಹ್ಣಾತಿ। ಸ ಏವೈನಮಮುಷ್ಮಿಲ್ಲೋಕೇ ಕಾಮ ಆಗಚ್ಛತಿ। ಕಾಮ್ಯೈತತ್ತ ಏಷಾ ತೇ ಕಾಮದಕ್ಷಿಣೇತ್ಯಾಹ। ಕಾಮ ಏವ ತದ್ಯಜಮಾನೋಽಮುಷ್ಮಿಲ್ಲೋಕೇ ದಕ್ಷಿಣಾಮಿಚ್ಛತಿ। ನ ಪ್ರತಿಗ್ರಹೀತರಿ। ಯ ಏವಂ ವಿದ್ವಾಂ ದಕ್ಷಿಣಾಂ ಪ್ರತಿಗೃಹ್ಣಾತಿ। ಅನೃಣಾಮೇವೈನಾಂ ಪ್ರತಿಗೃಹ್ಣಾತಿ ॥ ೩೩ ॥

ವ್ಲೀನಾತ್ಯಶ್ವಮಿತ್ಯಾಹಾಙ್ಗೀರಸಃ ಪ್ರತಿಗ್ರಹೀತ್ರ ಇತ್ಯಾಹ ಪ್ರತಿಗ್ರಹೀತೇತ್ಯಾಹ ದಕ್ಷಿಣೇತ್ಯಾಹ ಚತ್ವಾರಿ ಚ ॥ 5 ॥

ಅನ್ತೋ ವಾ ಏಷ ಯಜ್ಞಸ್ಯ। ಯದ್ದಶಮಮಹಃ। ದಶಮೇಽಹನ್ಥ್ಸರ್ಪರಾಜ್ಞಿಯಾ ಋಗ್ಭಿಸ್ಸ್ತುವನ್ತಿ। ಯಜ್ಞಸ್ಯೈವಾನ್ತಮ್ಗತ್ವಾ। ಅನ್ನಾದ್ಯಮವರುಂಧತೇ। ತಿಸೃಭಿಸ್ಸ್ತುವನ್ತಿ। ತ್ರಯ ಇಮೇ ಲೋಕಾಃ। ಏಭ್ಯ ಏವ ಲೋಕೇಭ್ಯೋಽನ್ನಾದ್ಯಮವರುಂಧತೇ। ಪೃಶ್ನಿವತೀರ್ಭವನ್ತಿ। ಅನ್ನಂ ವೈ ಪೃಶ್ನಿ ॥ ೩೪ ॥ ಅನ್ನಮೇವಾವರುಂಧತೇ। ಮನಸಾ ಪ್ರಸೌತಿ। ಮನಸೋದ್ಗಾಯತಿ। ಮನಸಾ ಪ್ರತಿಹರತಿ। ಮನ ಇವ ಹಿ ಪ್ರಜಾಪತಿಃ। ಪ್ರಜಾಪತೇ-

ರಾಪ್ತ್ಯೈ। ದೇವಾ ವೈ ಸರ್ಪಾಃ। ತೇಷಾಮಿಯಗ್ಂ ರಾಜ್ಞೀ। ಯಥ್ಸರ್ಪರಾಜ್ಞಿಯಾ ಋಗ್ಭಿಸ್ತುವನ್ತಿ। ಅಸ್ಯಾಮೇವ ಪ್ರತಿತಿಷ್ಠನ್ತಿ ॥೩೫॥ ಚತುರ್ಹೋತ್ಫ್ನ್ ಹೋತಾ ವ್ಯಾಚಷ್ಟೇ। ಸ್ತುತಮನು-ಶಗ್ಂಸತಿ ಶಾನ್ತ್ಯೈ। ಅನ್ತೋ ವಾ ಏಷ ಯಜ್ಞಸ್ಯ। ಯದ್ದಶಮಮಹಃ। ಏತತ್ಖಲು ವೈ ದೇವಾನಾಂ ಪರಮಮ್ಗುಹ್ಯಂ ಬ್ರಹ್ಮ। ಯಚ್ಚತುರ್-ಹೋತಾರಃ। ದಶಮೇಽಹಗ್ಶ್ಚತುರ್ಹೋತ್ಫ್ನ್ವ್ಯಾಚಷ್ಟೇ। ಯಜ್ಞ-ಸ್ಯೈವಾನ್ತಮ್ಗತ್ವಾ। ಪರಮಂ ದೇವಾನಾಮ್ಗುಹ್ಯಂ ಬ್ರಹ್ಮಾವರುನ್ಧೇ। ತದೇವ ಪ್ರಕಾಶಮ್ಗಮಯತಿ ॥೩೬॥ ತದೇನಂ ಪ್ರಕಾಶಮ್ಗತಮ್। ಪ್ರಕಾಶಂ ಪ್ರಜಾನಾಮ್ಗಮಯತಿ। ವಾಚಂ ಯಚ್ಛತಿ। ಯಜ್ಞಸ್ಯ ಧೃತ್ಯೈ। ಯಜಮಾನದೇವತ್ಯಂ ವಾ ಅಹಃ। ಭ್ರಾತೃವ್ಯದೇವತ್ಯಾ ರಾತ್ರಿಃ। ಅಹ್ನಾ ರಾತ್ರಿಂ ಧ್ಯಾಯೇತ್। ಭ್ರಾತೃವ್ಯಸ್ಯೈವ ತಲ್ lೋಕಂ ವೃಙ್ಕ್ತೇ। ಯದ್ದಿವಾ ವಾಚಂ ವಿಸೃಜೇತ್। ಅಹರ್ಭ್ರಾತೃವ್ಯಾಯೋಚ್ಚಿಗ್ಂಷೇತ್। ಯನ್ನಕ್ತಂ ವಿಸೃಜೇತ್। ರಾತ್ರಿಂ ಭ್ರಾತೃವ್ಯಾಯೋಚ್ಚಿಗ್ಂಷೇತ್। ಅಧಿವೃಕ್ಷಿ-ಸೂರ್ಯೇ ವಾಚಂ ವಿಸೃಜತಿ। ಏತಾವನ್ತಮೇವಾಸ್ಮೈ lೋಕ ಮುಚ್ಚಿಗ್ಂಷತಿ। ಯಾವದಾದಿತ್ಯೋಽಸ್ತಮೇತಿ ॥೩೭॥

ಪೃಶ್ನಿತಿಷ್ಠನ್ತಿ ಗಮಯತಿ ಶಿಗ್ಂಷೇತ್ಪಞ್ಚ ಚ ॥6॥

ಪ್ರಜಾಪತಿಃ ಪ್ರಜಾ ಅಸೃಜತ। ತಾಸ್ಸೃಷ್ಟಾಸ್ಸಮಶ್ಲಿಷ್ಯನ್। ತಾ ರೂಪೇಣಾನು ಪ್ರಾವಿಶತ್। ತಸ್ಮಾದಾಹುಃ। ರೂಪಂ ವೈ ಪ್ರಜಾಪತಿರಿತಿ। ತಾನಾಮ್ನಾನು ಪ್ರಾವಿಶತ್। ತಸ್ಮಾದಾಹುಃ। ನಾಮ ವೈ ಪ್ರಜಾಪತಿರಿತಿ। ತಸ್ಮಾದಪ್ಯಾಮಿತ್ರೌ ಸಜ್ಗತ್ಯ। ನಾಮ್ನಾ ಚೇದ್ಧ್ವಯೇತೇ ॥ ೩೮ ॥ ಮಿತ್ರಮೇವ ಭವತಃ। ಪ್ರಜಾಪತಿರ್ದೇವಾಸುರಾನಸೃಜತ। ಸ ಇಂದ್ರಮಪಿ ನಾಸೃಜತ। ತಂದೇವಾ ಅಬ್ರುವನ್। ಇಂದ್ರನ್ನೋ ಜನಯೇತಿ। ಸ ಆತ್ಮನ್ನಿಂದ್ರಮಪಶ್ಯತ್। ತಮಸೃಜತ। ತನ್ತ್ರಿಷ್ಟುಗ್ವೀರ್ಯಂ ಭೂತ್ವಾನು ಪ್ರಾವಿಶತ್। ತಸ್ಯವಜ್ರಃ ಪಞ್ಚದಶೋ ಹಸ್ತ ಆಪದ್ಯತ। ತೇನೋದಯ್ಯಾಸುರಾನಭ್ಯಭವತ್ ॥ ೩೯ ॥ ಯ ಏವಂ ವೇದ। ಅಭಿ ಭ್ರಾತೃವ್ಯಾನ್ಭವತಿ। ತೇ ದೇವಾ ಅಸುರೈರ್ವಿಜಿತ್ಯ। ಸುವರ್ಗಲ್ಲೋಕಮಾಯನ್। ತೇಽಮುಷ್ಮಿನ್ಲೋಕೇ ವ್ಯಖ್ಯಿಧ್ಯನ್। ತೇಽಬ್ರುವನ್। ಅಮುತಃ ಪ್ರದಾನಂ ವಾ ಉಪಜಿಜೀವಿಮೇತಿ। ತೇ ಸಪ್ತಹೋತಾರಂ ಯಜ್ಞಂ ವಿಧಾಯಾಯಾಸ್ಯಮ್। ಆಜ್ಗೀರಸಂ ಪ್ರಾಹಿಣ್ವನ್। ಏತೇನಾಮುತ್ರ ಕಲ್ಪಯೇತಿ ॥ ೪೦ ॥ ತಸ್ಯ ವಾ ಇಯಜ್ಕ್ಲಪ್ತಿಃ। ಯದಿದಂ ಕಿಞ್ಚ। ಯ ಏವಂ ವೇದ। ಕಲ್ಪತೇಽಸ್ಮೈ। ಸ ವಾ ಅಯಂ ಮನುಷ್ಯೇಷು ಯಜ್ಞಸ್ಸಪ್ತಹೋತಾ। ಅಮುತ್ರ

ಸದ್ಭ್ಯೋ ದೇವೇಭ್ಯೋ ಹವ್ಯಂ ವಹತಿ। ಯ ಏವಂ ವೇದ। ಉಪೈನಂ ಯಜ್ಞೋ ನಮತಿ। ಸೋಽಮನ್ಯತ। ಅಭಿ ವಾ ಇಮೇಽಸ್ಮಾಲ್ಲೋಕಾದಮುಲ್ಲೋಕಮಿಷ್ಯನ್ತ ಇತಿ। ಸ ವಾಚಸ್ಪತೇ ಹೃದಿತಿ ವ್ಯಾಹರತ್। ತಸ್ಮಾತ್ಪುತ್ರೋ ಹೃದಯಮ್। ತಸ್ಮಾದಸ್ಮಾಲ್ಲೋಕಾದಮುಲ್ಲೋಕನ್ನಾಭಿಕಾಮಯನ್ತೇ। ಪುತ್ರೋ ಹಿ ಹೃದಯಮ್ ॥ ೪೧ ॥

ಹ್ವಯೇತೇ ಅಭವತ್ಕಲ್ಪಯೇತೀತಿ ಚತ್ವಾರಿ ಚ ॥ 7 ॥

ದೇವಾ ವೈ ಚತುರ್ಹೋತೃಭಿರ್ಯಜ್ಞಮತನ್ವತ। ತೇ ವಿ ಪಾಪ್ಮನಾ ಭ್ರಾತೃವ್ಯೇಣಾಜಯಂತ। ಅಭಿ ಸುವರ್ಗಲ್ಲೋಕಮಜಯನ್। ಯ ಏವಂ ವಿದ್ವಾಗ್ಂಶ್ಚತುರ್ಹೋತೃಭಿರ್ಯಜ್ಞಂ ತನುತೇ। ವಿ ಪಾಪ್ಮನಾ ಭ್ರಾತೃವ್ಯೇಣ ಜಯತೇ। ಅಭಿ ಸುವರ್ಗಲ್ಲೋಕೞ್ಜಯತಿ। ಷಡ್ಢೋತ್ರಾ ಪ್ರಾಯಣೀಯಮಾಸಾದಯತಿ। ಅಮುಷ್ಮೈ ವೈ ಲೋಕಾಯ ಷಡ್ಢೋತಾ। ಷ್ಣಂತಿ ಖಲು ವಾ ಏತಥ್ಸೋಮಮ್। ಯದಭಿಷುಣ್ವಂತಿ ॥ ೪೨ ॥ ಋಜುಧೈವೈನಮಮುಲ್ಲೋಕಞ್ಗಮಯತಿ। ಚತುರ್ಹೋತ್ರಾಽತಿಥ್ಯಮ್। ಯಶೋ ವೈ ಚತುರ್ಹೋತಾ। ಯಶ ಏವಾತ್ಮಂಧತ್ತೇ। ಪಞ್ಚಹೋತ್ರಾ ಪಶುಮುಪಸಾದಯತಿ। ಸುವರ್ಗ್ಯೋ ವೈ ಪಞ್ಚಹೋತಾ। ಯಜಮಾನಃ ಪಶುಃ।

ಯಜಮಾನಮೇವ ಸುವರ್ಗಲ್ಲೋಕಙ್ಗಮಯತಿ। ಗ್ರಹಾನ್ಗೃಹೀತ್ವಾ
ಸಪ್ತಹೋತಾರಞ್ಜುಹೋತಿ। ಇಂದ್ರಿಯಂ ವೈ ಸಪ್ತಹೋತಾ ॥ ೪೩ ॥
ಇಂದ್ರಿಯಮೇವಾತ್ಮಂಧತ್ತೇ। ಯೋ ವೈ ಚತುರ್ಹೋತೃನನು ಸವನಂ
ತರ್ಪಯತಿ। ತೃಪ್ಯತಿ ಪ್ರಜಯಾ ಪಶುಭಿಃ। ಉಪೈನಗ್ಂ
ಸೋಮಪೀಥೋ ನಮತಿ। ಬಹಿಷ್ಪವಮಾನೇ ದಶಹೋತಾರಂ
ವ್ಯಾಚಖ್ಷೀತ। ಮಾಧ್ಯಂದಿನೇ ಪವಮಾನೇ ಚತುರ್ಹೋತಾರಮ್।
ಆರ್ಭವೇ ಪವಮಾನೇ ಪಞ್ಚಹೋತಾರಮ್। ಪಿತೃಯಜ್ಞೇ ಷಡ್ಢೋ-
ತಾರಮ್। ಯಜ್ಞಾಯಜ್ಞಿಯಸ್ಯ ಸ್ತೋತ್ರೇ ಸಪ್ತಹೋತಾರಮ್।
ಅನುಸವನಮೇವೈನಾಗ್ಂಸ್ತರ್ಪಯತಿ ॥ ೪೪ ॥ ತೃಪ್ಯತಿ ಪ್ರಜಯಾ
ಪಶುಭಿಃ। ಉಪೈನಗ್ಂ ಸೋಮಪೀಥೋ ನಮತಿ। ದೇವಾ ವೈ
ಚತುರ್ಹೋತೃಭಿಸ್ಸತ್ರಮಾಸತ। ಋದ್ಧಿಪರಿಮಿತಂ ಯಶಸ್ಕಾಮಾಃ।
ತೇಽಬ್ರುವನ್। ಯನ್ನಃ ಪ್ರಥಮಯ್ಯಶ ಋಚ್ಛಾತ್। ಸರ್ವೇಷಾ-
ನ್ನಸ್ತಥ್ಸಹಾಸದಿತಿ। ಸೋಮಶ್ಚತುರ್ಹೋತ್ರಾ। ಅಗ್ನಿಃ ಪಞ್ಚಹೋತ್ರಾ।
ಧಾತಾ ಷಡ್ಢೋತ್ರಾ ॥ ೪೫ ॥ ಇಂದ್ರಸ್ಸಪ್ತಹೋತ್ರಾ। ಪ್ರಜಾಪತಿ-
ರ್ದಶಹೋತ್ರಾ। ತೇಷಾಗ್ಂ ಸೋಮಗ್ಂ ರಾಜಾನಯ್ಯಶ ಆರ್ಚತ್।
ತನ್ನ್ಯಕಾಮಯತ। ತೇನಾಪಾಕ್ರಾಮತ್। ತೇನ ಪ್ರಲಾಯಮಚರತ್।

ತಂದೇವಾಃ ಪ್ರೈಷೈಃ ಪ್ರೈಷಮೈಚ್ಛನ್। ತತ್ಪ್ರೈಷಾಣಾಂ ಪ್ರೈಷತ್ವಮ್। ನಿವಿದ್ಭಿರ್ನ್ಯವೇದಯನ್। ತನ್ನಿವಿದಾನ್ನಿವಿತ್ತ್ವಮ್ ॥ ೪೬ ॥ ಆಪ್ರೀಭಿರಾಪ್ನುವನ್। ತದಾಪ್ರೀಣಾಮಾಪ್ರಿತ್ವಮ್। ತಮಘ್ನನ್। ತಸ್ಯ-ಯಶೋ ವ್ಯಗೃಹ್ಣತ। ತೇ ಗ್ರಹಾ ಅಭವನ್। ತದ್ಗ್ರಹಾಣಾ-ಙ್ಗ್ರಹತ್ವಮ್। ಯಸ್ಯೈವಂ ವಿದುಷೋ ಗ್ರಹಾ ಗೃಹ್ಯಂತೇ। ತಸ್ಯ ತ್ವೇವ ಗೃಹೀತಾಃ। ತೇಽಬ್ರುವನ್। ಯೋ ವೈ ನ ಶ್ರೇಷ್ಠೋಽಭೂತ್ ॥ ೪೭ ॥ ತಮವಧಿಷ್ಮ। ಪುನರಿಮಗ್ಂ ಸುವಾಮಹಾ ಇತಿ। ತಞ್ಛಂದೋಭಿರಸುವಂತ। ತಚ್ಛಂದಸಾಞ್ಛಂದಸ್ತ್ವಮ್। ಸಾಮ್ನಾ ಸಮಾನಯನ್। ತಥ್ಸಾಮ್ನಸ್ಸಾಮತ್ವಮ್। ಉಕ್ಥೈರುದಸ್ಥಾಪಯನ್। ತದುಕ್ಥಾನಾಮುಕ್ಥತ್ವಮ್। ಯ ಏವಂ ವೇದ। ಪ್ರತ್ಯೇವತಿಷ್ಠತಿ ॥೪೮॥ ಸರ್ವಮಾಯುರೇತಿ। ಸೋಮೋ ವೈ ಯಶಃ। ಯ ಏವಂ ವಿದ್ವಾ-ನ್ಥ್ಸೋಮಮಾಗಚ್ಛತಿ। ಯಶ ಏವೈನಮೃಚ್ಛತಿ। ತಸ್ಮಾದಾಹುಃ। ಯಶ್ಚೈವಂ ವೇದ ಯಶ್ಚನ। ತಾವುಭೌ ಸೋಮಮಾಗಚ್ಛತಃ। ಸೋಮೋ ಹಿ ಯಶಃ। ತಂ ತ್ವಾವ ಯಶ ಋಚ್ಛತೀತ್ಯಾಹುಃ। ಯಸ್ಸೋಮೇ ಸೋಮಂ ಪ್ರಾಹೇತಿ। ತಸ್ಮಾತ್ಸೋಮೇ ಸೋಮಃ ಪ್ರೋಚ್ಯಃ। ಯಶ ಏವೈನಮೃಚ್ಛತಿ ॥ ೪೯ ॥

ಅಭಿಷುಣ್ವಂತಿ ಸಪ್ತಹೋತಾ ತರ್ಪಯತಿ ಷಡ್ಢೋತ್ರಾ ನಿವಿತ್ತ್ವಮಭೂತ್ತಿಷ್ಠತಿ ಪ್ರಾಹೇತಿ ದ್ವೇ ಚ ॥ 8॥

ಇದಂ ವಾ ಅಗ್ರೇ ನೈವ ಕಿಞ್ಚ ನಾಸೀತ್। ನ ದ್ಯೌರಾಸೀತ್। ನ ಪೃಥಿವೀ। ನಾಂತರಿಕ್ಷಮ್। ತದಸದೇವ ಸನ್ಮನೋಽಕುರುತ ಸ್ಯಾಮಿತಿ। ತದತಪ್ಯತ। ತಸ್ಮಾತ್ತೇಪಾನಾದ್ಧೂಮೋಽಜಾಯತ। ತದ್ಭೂಯೋಽತಪ್ಯತ। ತಸ್ಮಾತ್ತೇಪಾನಾದಗ್ನಿರಜಾಯತ। ತದ್ಭೂಯೋಽತಪ್ಯತ ॥ ೫೦ ॥ ತಸ್ಮಾತ್ತೇಪಾನಾಜ್ಜ್ಯೋತಿರಜಾಯತ। ತದ್ಭೂಯೋಽತಪ್ಯತ। ತಸ್ಮಾತ್ತೇಪಾನಾದರ್ಚಿರಜಾಯತ। ತದ್ಭೂಯೋಽತಪ್ಯತ। ತಸ್ಮಾತ್ತೇಪಾನಾನ್ಮರೀಚಯೋಽಜಾಯಂತ। ತದ್ಭೂಯೋಽತಪ್ಯತ। ತಸ್ಮಾತ್ತೇಪಾನಾದುದಾರಾ ಅಜಾಯಂತ। ತದ್ಭೂಯೋಽತಪ್ಯತ। ತದಭ್ರಮಿವ ಸಮಹನ್ಯತ। ತದ್ವಸ್ತಿಮಭಿನತ್ ॥ ೫೧ ॥ ಸ ಸಮುದ್ರೋಽಭವತ್। ತಸ್ಮಾತ್ಸಮುದ್ರಸ್ಯ ನ ಪಿಬಂತಿ। ಪ್ರಜನನಮಿವ ಹಿ ಮನ್ಯಂತೇ। ತಸ್ಮಾತ್ಪ್ರಶೋರ್ಜಾಯಮಾನಾದಾಪಃ ಪುರಸ್ತಾದ್ಯಂತಿ। ತದ್ದಶಹೋತಾಽನ್ವಸೃಜ್ಯತ। ಪ್ರಜಾಪತಿರ್ವೈ ದಶಹೋತಾ। ಯ ಏವಂತಪಸೋ ವೀರ್ಯಂ ವಿದ್ವಾಗ್ಂಸ್ತಪ್ಯತೇ। ಭವತ್ಯೇವ। ತದ್ವಾ ಇದಮಾಪಸ್ಸಲಿಲಮಾಸೀತ್। ಸೋಽರೋದೀ-

ತ್ಪ್ರಜಾಪತಿಃ ॥ ೫೨ ॥ ಸ ಕಸ್ಮಾಅಜ್ಞಿ। ಯದ್ಯಸ್ಯಾ ಅಪ್ರತಿಷ್ಠಾಯಾ ಇತಿ। ಯದಫ್ಸ್ವವಾಪದ್ಯತ। ಸಾ ಪೃಥಿವ್ಯಭವತ್। ಯದ್ವ್ಯಮೃಷ್ಟ। ತದಂತರಿಖ್ಷಮಭವತ್। ಯದೂರ್ದ್ಧಮುದಮೃಷ್ಟ। ಸಾ ದ್ಯೌರಭವತ್। ಯದರೋದೀತ್। ತದನಯೋ ರೋದಸ್ತ್ವಮ್ ॥ ೫೩ ॥ ಯ ಏವಂ ವೇದ। ನಾಸ್ಯ ಗೃಹೇ ರುದಂತಿ। ಏತದ್ವಾ ಏಷಾಲ್ಲೋಕಾನಾಜ್ಞನ್ಮ। ಯ ಏವಮೇಷಾಲ್ಲೋಕಾನಾಜ್ಞನ್ಮ ವೇದ। ನೈಷು ಲೋಕೇಷ್ವಾರ್ತಿಮಾರ್ಚ್ಚತಿ। ಸ ಇಮಾಂ ಪ್ರತಿಷ್ಠಾಮವಿಂದತ। ಸ ಇಮಾಂ ಪ್ರತಿಷ್ಠಾಂ ವಿತ್ವಾಽಕಾಮಯತ ಪ್ರಜಾಯೇಯೇತಿ। ಸ ತಪೋಽತಪ್ಯತ। ಸೋಂಽತರ್ವಾನಭವತ್। ಸ ಜಘನಾದಸುರಾನಸೃಜತ ॥ ೫೪ ॥ ತೇಭ್ಯೋ ಮೃನ್ಮಯೇ ಪಾತ್ರೇಽನ್ನಮದುಹತ್। ಯಾಽಸ್ಯ ಸಾ ತನೂರಾಸೀತ್। ತಾಮಪಾಹತ। ಸಾತಮಿಸ್ರಾಽಭವತ್। ಸೋಽಕಾಮಯತ ಪ್ರಜಾಯೇಯೇತಿ। ಸ ತಪೋಽತಪ್ಯತ। ಸೋಂಽತರ್ವಾನಭವತ್। ಸ ಪ್ರಜನನಾದೇವ ಪ್ರಜಾ ಅಸೃಜತ। ತಸ್ಮಾದಿಮಾ ಭೂಯಿಷ್ಠಾಃ। ಪ್ರಜನನಾದ್ಧ್ಯೇನಾ ಅಸೃಜತ ॥ ೫೫ ॥ ತಾಭ್ಯೋದಾರುಮಯೇ ಪಾತ್ರೇ ಪಯೋಽದುಹತ್। ಯಾಽಸ್ಯ ಸಾ ತನೂರಾಸೀತ್। ತಾಮಪಾಹತ। ಸಾ ಜೋಧ್ಸ್ನಾಽಭವತ್।

ಸೋಽಕಾಮಯತ ಪ್ರಜಾಯೇಯೇತಿ। ಸ ತಪೋಽತಪ್ಯತ। ಸೋಂಽತರ್ವಾನಭವತ್। ಸ ಉಪಪಕ್ಷಾಭ್ಯಾಮೇವರ್ತೂನಸೃಜತ। ತೇಭ್ಯೋ ರಜತೇ ಪಾತ್ರೇ ಘೃತಮದುಹತ್। ಯಾಽಸ್ಯ ಸಾ ತನೂರಾಸೀತ್ ॥ ೫೬ ॥ ತಾಮಪಾಹತ। ಸೋಽಹೋರಾತ್ರಯೋಸ್ಸಂಧಿರಭವತ್। ಸೋಽಕಾಮಯತ ಪ್ರಜಾಯೇಯೇತಿ। ಸ ತಪೋಽತಪ್ಯತ। ಸೋಂಽತರ್ವಾನಭವತ್। ಸ ಮುಖಾದ್ದೇವಾನಸೃಜತ। ತೇಭ್ಯೋ ಹರಿತೇ ಪಾತ್ರೇ ಸೋಮಮದುಹತ್। ಯಾಽಸ್ಯ ಸಾ ತನೂರಾಸೀತ್। ತಾಮಪಾಹತ। ತದಹರಭವತ್ ॥ ೫೭ ॥ ಏತೇ ವೈ ಪ್ರಜಾಪತೇರ್ದೋಹಾಃ। ಯ ಏವಂ ವೇದ। ದುಹ ಏವ ಪ್ರಜಾಃ। ದಿವಾ ವೈ ನೋಽಭೂದಿತಿ। ತದ್ದೇವಾನಾಂ ದೇವತ್ವಮ್। ಯ ಏವಂ ದೇವಾನಾಂ ದೇವತ್ವಂ ವೇದ। ದೇವವಾನೇವ ಭವತಿ। ಏತದ್ವಾ ಅಹೋರಾತ್ರಾಣಾಞ್ಜನ್ಮ। ಯ ಏವಮಹೋರಾತ್ರಾಣಾಞ್ಜನ್ಮ ವೇದ। ನಾಹೋರಾತ್ರೇಷ್ವಾರ್ತಿಮಾರ್ಚ್ಛತಿ ॥ ೫೮ ॥ ಅಸತೋಽಧಿ ಮನೋಽಸೃಜ್ಯತ। ಮನಃ ಪ್ರಜಾಪತಿಮಸೃಜತ। ಪ್ರಜಾಪತಿಃ ಪ್ರಜಾ ಅಸೃಜತ। ತದ್ವಾ ಇದಂ ಮನಸ್ಯೇವ ಪರಮಂ ಪ್ರತಿಷ್ಠಿತಮ್। ಯದಿದಜ್ಞೇ। ತದೇತಚ್ಛ್ಲೋ॒ವೇವಸ್ಯ ಸನ್ನಾಮ ಬ್ರಹ್ಮ। ವ್ಯುಚ್ಛಂತೀ ವ್ಯುಚ್ಛಂತ್ಯಸ್ಮೈ

ವಸ್ಯಸೀ ವಸ್ಯಸೀ ವ್ಯೃಚ್ಛತಿ। ಪ್ರಜಾಯತೇ ಪ್ರಜಯಾ ಪಶುಭಿಃ। ಪ್ರ ಪರಮೇಷ್ಠಿನೋ ಮಾತ್ರಾಮಾಪ್ನೋತಿ। ಯ ಏವಂ ವೇದ ॥ ೫೯ ॥

ಅಗ್ನಿರಜಾಯತ ತದ್ಬೃಯೋಽತಪ್ಯತಾಭಿನದರೋಧೀತ್ತ್ವಜಾ-ಪತೀ ರೋದಸ್ತ್ವಮಸೃಜತಾಸೃಜತ ಘೃತಮದುಹದ್ಯಾಽಸ್ಯ ಸಾ ತನೂರಾಸೀದಹರಭವದೃಚ್ಛತಿ ವೇದ ॥ 9 ॥

ಇದಂ ಧೂಮೋಽಗ್ನಿರ್ಜ್ಯೋತಿರರ್ಚಿರ್ಮರೀಚಯ ಉದಾ-ರಾಸ್ತದಭ್ರಗ್ಂ ಸ ಜಘನಾಥ್ಸಾ ತಮಿಸ್ರಾ ಸ ಪ್ರಜನನಾಥ್ಸಾ ಜೋಥ್ಸಾ ಸ ಉಪಪಖ್ಷಾಭ್ಯಾಗ್ಂ ಸೋಽಹೋರಾತ್ರಯೋಸ್ಸಂಧಿ ಸ್ಸ ಮುಖಾತ್ತದಹರ್ದೇವವಾನ್ಮೃನ್ಮಯೇ ದಾರುಮಯೇ ರಜತೇ ಹರಿತೇ ತೇಭ್ಯಸ್ತಾಭ್ಯೋ ದ್ವೇ ತೇಽನ್ನಂ ಪಯೋಘೃತಗ್ಂ ಸೋಮಮ್ ॥

ಪ್ರಜಾಪತಿರಿಂದ್ರಮಸೃಜತಾನುಜಾವರಂದೇವಾನಾಮ್। ತಂ ಪ್ರಾಹಿಣೋತ್। ಪರೇಹಿ। ಏತೇಷಾಂದೇವಾನಾಮಧಿಪತಿರೇಧೀತಿ। ತಂದೇವಾ ಅಬ್ರುವನ್। ಕಸ್ತ್ವಮಸಿ। ವಯಂ ವೈ ತ್ವಚ್ಛ್ರೇಯಾಗ್ಂಸಸ್ಸ್ಯ ಇತಿ। ಸೋಽಬ್ರವೀತ್। ಕಸ್ತ್ವಮಸಿ ವಯಂ ವೈ ತ್ವಚ್ಛ್ರೇಯಾಗ್ಂಸಸ್ಸ್ಯ ಇತಿ ಮಾ ದೇವಾ ಅವೋಚನ್ನಿತಿ। ಅಥ ವಾ ಇದಂ-

ತರ್ಹಿ ಪ್ರಜಾಪತೌ ಹರ ಆಸೀತ್ ॥ ೬೦ ॥ ಯದಸ್ಮಿನ್ನಾದಿತ್ಯೇ।
ತದೇನಮಬ್ರವೀತ್। ಏತನ್ಮೇ ಪ್ರಯಚ್ಛ। ಅಥಾಹಮೇ ತೇಷಾಂ-
ದೇವಾನಾಮಧಿಪತಿರ್ಭವಿಷ್ಯಾಮೀತಿ। ಕೋಹಗ್ಗ್ಸ್ಯಾಮಿತ್ಯ-
ಬ್ರವೀತ್। ಏತತ್ತದಾಯೇತಿ। ಏತಥ್ಸ್ಯ ಇತ್ಯಬ್ರವೀತ್। ಯದೇತ-
ದ್ಬ್ರವೀಷೀತಿ। ಕೋ ಹ ವೈ ನಾಮ ಪ್ರಜಾಪತಿಃ। ಯ ಏವಂ ವೇದ
॥ ೬೧ ॥ ವಿದುರೇನನ್ನಾಮ್ನಾ। ತದಸ್ಮೈ ರುಕ್ಮಂ ಕೃತ್ವಾ ಪ್ರತ್ಯಮುಂಚತ್।
ತತೋ ವಾ ಇಂದ್ರೋ ದೇವಾನಾಮಧಿಪತಿರಭವತ್। ಯ ಏವಂ
ವೇದ। ಅಧಿಪತಿರೇವ ಸಮಾನಾನಾಂ ಭವತಿ। ಸೋಮನ್ಯತ। ಕಿಂಕಿಂ
ವಾ ಅಕರಮಿತಿ। ಸ ಚಂದ್ರಂ ಮ ಆಹರೇತಿ ಪ್ರಾಲಪತ್।
ತಚ್ಚಂದ್ರಮಸಶ್ಚಂದ್ರಮಸ್ತ್ವಮ್। ಯ ಏವಂ ವೇದ ॥ ೬೨ ॥
ಚಂದ್ರವಾನೇವ ಭವತಿ। ತಂದೇವಾ ಅಬ್ರುವನ್। ಸುವೀರ್ಯೋ
ಫಮರ್ಯಾಯಥಾ ಗೋಪಾಯತ ಇತಿ। ತಥ್ಸೂರ್ಯಸ್ಯ
ಸೂರ್ಯತ್ವಮ್। ಯ ಏವಂ ವೇದ। ನೈನಂದಭ್ನೋತಿ। ಕ ಶ್ಚನಾಸ್ಮಿನ್ವಾ
ಇದಮಿಂದ್ರಿಯಂ ಪ್ರತ್ಯಸ್ಥಾದಿತಿ। ತದಿಂದ್ರಸ್ಯೇಂದ್ರತ್ವಮ್। ಯ ಏವಂ
ವೇದ। ಇಂದ್ರಿಯಾವ್ಯೇವ ಭವತಿ ॥ ೬೩ ॥ ಅಯಂ ವಾ ಇದಂ
ಪರಮೋಽಭೂದಿತಿ। ತತ್ಪರಮೇಷ್ಠಿನಃ ಪರಮೇಷ್ಠಿತ್ವಮ್। ಯ ಏವಂ

ವೇದ। ಪರಮಾಮೇವ ಕಾಷ್ಠಾಂ ಗಚ್ಛತಿ। ತಂದೇವಾಸ್ಸಮಂತಂ
ಪರ್ಯವಿಶನ್। ವಸವಃ ಪುರಸ್ತಾತ್। ರುದ್ರಾ ದಕ್ಷಿಣತಃ। ಆದಿತ್ಯಾಃ
ಪಶ್ಚಾತ್। ವಿಶ್ವೇದೇವಾ ಉತ್ತರತಃ। ಅಂಗಿರಸಃ ಪ್ರತ್ಯಂಚಮ್
॥ ೬೪ ॥ ಸಾಧ್ಯಾಃ ಪರಾಂಚಮ್। ಯ ಏವಂ ವೇದ। ಉಪೈನಗ್ಂ
ಸಮಾನಾಸ್ಸಂ ವಿಶಂತಿ। ಸ ಪ್ರಜಾಪತಿರೇವ ಭೂತ್ವಾ ಪ್ರಜಾ
ಅವಯತ್। ತಾ ಅಸ್ಮೈ ನಾತಿಷ್ಠಂತಾನ್ನಾದ್ಯಾಯ। ತಾಮುಖಂ
ಪುರಸ್ತಾತ್ಪರ್ಯಂತೀಃ। ದಕ್ಷಿಣತಃ ಪರ್ಯಾಯನ್। ಸ ದಕ್ಷಿಣತಃ
ಪರ್ಯವರ್ತಯತ। ತಾ ಮುಖಂ ಪುರಸ್ತಾತ್ಪರ್ಯಂತೀಃ। ಮುಖಂ
ದಕ್ಷಿಣತಃ ॥ ೬೫ ॥ ಪಶ್ಚಾತ್ಪರ್ಯಾಯನ್। ಸ ಪಶ್ಚಾತ್ಪರ್ಯವರ್ತ
ಯತ। ತಾ ಮುಖಂ ಪುರಸ್ತಾತ್ಪರ್ಯಂತೀಃ। ಮುಖಂ ದಕ್ಷಿಣತಃ।
ಮುಖಂ ಪಶ್ಚಾತ್। ಉತ್ತರತಃ ಪರ್ಯಾಯನ್। ಸ ಉತ್ತರತಃ
ಪರ್ಯವರ್ತಯತ। ತಾ ಮುಖಂ ಪುರಸ್ತಾತ್ಪರ್ಯಂತೀಃ। ಮುಖಂ-
ದಕ್ಷಿಣತಃ। ಮುಖಂ ಪಶ್ಚಾತ್ ॥ ೬೬ ॥ ಮುಖಮುತ್ತರತಃ।
ಊರ್ಧ್ವಾ ಉದಾಯನ್। ಸ ಉಪರಿಷ್ಟಾನ್ನ್ಯವರ್ತಯತ।
ತಾಸ್ಸರ್ವತೋಮುಖೋ ಭೂತ್ವಾऽऽವಯತ್। ತತೋ ವೈ ತಸ್ಮೈ
ಪ್ರಜಾ ಅತಿಷ್ಠಂತಾನ್ನಾದ್ಯಾಯ। ಯ ಏವಂ ವಿದ್ವಾನ್ಪರಿ ಚ

ವರ್ತಯತೇ ನಿ ಚ। ಪ್ರಜಾಪತಿರೇವ ಭೂತ್ವಾ ಪ್ರಜಾ ಅತ್ತಿ। ತಿಷ್ಠಂತೇಽಸ್ಮೈ ಪ್ರಜಾ ಅನ್ನಾದ್ಯಾಯ। ಅನ್ನಾದ ಏವ ಭವತಿ ॥ ೬೭ ॥

ಆಸೀದ್ವೇದ ಚಂದ್ರಮಸ್ತ್ವಂ ಯ ಏವಂ ವೇದೇಂದ್ರಿಯಾವ್ಯೇವ ಭವತಿ ಪ್ರತ್ಯಂಚಂ ಮುಖಂ ದಕ್ಷಿಣತೋ ಮುಖಂ ಪಶ್ಚಾನ್ನವ ಚ ॥ 10 ॥

ಪ್ರಜಾಪತಿರಕಾಮಯತ ಬಹೋರ್ಭೂಯಾನ್ಥ್ಸ್ಯಮಿತಿ। ಸ ಏತಂ ದಶಹೋತಾರಮಪಶ್ಯತ್। ತಂ ಪ್ರಾಯುಂಕ್ತ। ತಸ್ಯ ಪ್ರಯುಕ್ತಿ ಬಹೋರ್ಭೂಯಾನಭವತ್। ಯಃ ಕಾಮಯೇತ ಬಹೋರ್ಭೂಯಾನ್ಥ್ಸ್ಯಮಿತಿ। ಸ ದಶಹೋತಾರಂ ಪ್ರಯುಂಜೀತ। ಬಹೋರೇವ ಭೂಯಾನ್ಭವತಿ। ಸೋಽಕಾಮಯತ ವೀರೋಮ ಆಜಾಯೇತೇತಿ। ಸ ದಶಹೋತುಶ್ಚತುರ್ಹೋತಾರನ್ನಿರಮಿಮೀತ। ತಂ ಪ್ರಾಯುಂಕ್ತ ॥ ೬೮ ॥ ತಸ್ಯ ಪ್ರಯುಕ್ತೀಂದ್ರೋಽಜಾಯತ। ಯಃ ಕಾಮಯೇತ ವೀರೋಮ ಆಜಾಯೇತೇತಿ। ಸ ಚತುರ್ಹೋತಾರಂ ಪ್ರಯುಂಜೀತ। ಆಽಸ್ಯ ವೀರೋ ಜಾಯತೇ। ಸೋಽಕಾಮಯತ ಪಶುಮಾನ್ಥ್ಸ್ಯಮಿತಿ। ಸ ಚತುರ್ಹೋತುಃ ಪಂಚಹೋತಾರನ್ನಿರಮಿ-

ಮೀತ। ತಂ ಪ್ರಾಯುಂಕ್ತ । ತಸ್ಯ ಪ್ರಯುಕ್ತಿ ಪಶುಮಾನಭವತ್। ಯಃ
ಕಾಮಯೇತ ಪಶುಮಾನ್ಥ್ಸ್ಯಮಿತಿ। ಸ ಪಂಚಹೋತಾರಂ
ಪ್ರಯುಂಜೀತ ॥ ೬೯ ॥ ಪಶುಮಾನೇವ ಭವತಿ। ಸೋಽಕಾಮ-
ಯತರ್ತವೋ ಮೇ ಕಲ್ಪೇರನ್ನಿತಿ। ಸ ಪಂಚಹೋತುಷ್ಷಡ್ಢೋತಾರ-
